# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 200 Issue: 200 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 11.02.2025 • ಮಂಗಳವಾರ Tuesday • ಪುಟ:04 Page:04 • ಬೆಲೆ:2 Rs:2



ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.



1,10,000+
Digital E-PAPER READERS

No.1 HAMPI TIMES LEADING VIJAYANAGARA District News Paper

Contact for Advertisements: 9448633038

ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!

ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper

ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com

ನಿಮ್ಮ ಕೈಗೆಟಕುವ ದರದಲ್ಲಿ ಜಾಹೀರಾತುಗಳು...

ಹಂಪಿ ಟೈಮ್ಸ್ ಇ-ಪೇಪರ್

ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್


### ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗಾಗಿ ಹಂಪಿ ಟೈಮ್ಸ್ ಸಹಯೋಗದಲ್ಲಿ ಬಿಇಒ ಎಂ.ಚನ್ನಬಸಪ್ಪ ಕಾರ್ಯಕ್ರಮ ಆಯೋಜನೆ

# ಫೋನ್ ಇನ್‌ಗೆ ಭರಪೂರ ಸ್ಪಂದನೆ

- ರಾಜ್ಯದ ನಾನಾ ಮೂಲೆಗಳಿಂದ ಕರೆಗಳ ಸುರಿಮಳೆ
- ವಿದ್ಯಾರ್ಥಿಗಳಲ್ಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ ಭಯ ಹೋಗಲಾಡಿಸಿದ ತಜ್ಞರು
- ಒಂದು ಗಂಟೆಯಲ್ಲಿ ನಿರೀಕ್ಷೆಗು ಮೀರಿ ಬಂದ 300ಕ್ಕೂ ಅಧಿಕ ಕರೆಗಳು
- 12 ನಂಬರ್, 14 ತಜ್ಞ ಶಿಕ್ಷಕರು ಬಿಡುವಿಲ್ಲದೆ ಬಂದ ಕರೆಗಳಿಗೆ ಉತ್ತರ
- ಫೋನ್ ಇನ್ ಕಾರ್ಯಕ್ರಮ ಯಶಸ್ವಿಗೆ ಸಾಕ್ಷಿಯಾದ ಬಿಇಒ ಮತ್ತು ಶಿಕ್ಷಕರು
- ಹಂಪಿ ಟೈಮ್ಸ್ ಪ್ರಯತ್ನಕ್ಕೆ ಪಾಲಕರು, ವಿದ್ಯಾರ್ಥಿಗಳು, ಶಿಕ್ಷಕರಿಂದ ಮೆಚ್ಚುಗೆ
- ಫೋನ್ ಇನ್ ಕಾರ್ಯಕ್ರಮಕ್ಕೆ ಸಾಥ್ ನೀಡಿದ ಶಿಕ್ಷಣ ಇಲಾಖೆ
- ಅವಧಿ ನಂತರ ಬಂದ ಕರೆಗಳಿಗೂ ಶಿಕ್ಷಕರಿಂದ ಸ್ಪಂದನೆ



ಶಿಕ್ಷಕಿ ಆಯೇಷಾ ಬೇಗಂ



ಹೊಸಪೇಟೆ ಸರ್ಕಾರಿ ಪ.ಪೂ.ಕಾಲೇಜಿನ ಬಾಲಕಿಯರ ಪ್ರೌಢಶಾಲೆಯಲ್ಲಿ ಭಾನುವಾರ ಜರುಗಿದ ಫೋನ್‌ಇನ್ ಕಾರ್ಯಕ್ರಮದಲ್ಲಿ ಬಿಇಒ ಎಂ.ಚನ್ನಬಸಪ್ಪ, ಹಂಪಿ ಟೈಮ್ಸ್ ಸಂಪಾದಕ ಬಸಾಪುರ ಬಸವರಾಜ, ಎಸ್ಸೆಸ್ಸೆಲ್ಸಿ ನೂಡಲ್ ಅಧಿಕಾರಿ ಎಚ್. ಶಿವರಾಮಪ್ಪ, ವಿಷಯ ತಜ್ಞ ಶಿಕ್ಷಕರು ಉಪಸ್ಥಿತರಿದ್ದರು.



ಶಿಕ್ಷಕ ಮಲ್ಲಿಕಾರ್ಜುನ



ಶಿಕ್ಷಕ ರವಿ.ಆರ್.



ಶಿಕ್ಷಕಿ ವಿ.ಶಿವಮ್ಮ



ವಿದ್ಯಾರ್ಥಿಗಳನ್ನು ಪರೀಕ್ಷಾ ಒತ್ತಡದಿಂದ ಮುಕ್ತಿಗೊಳಿಸಲು, ವಿದ್ಯಾರ್ಥಿಗಳ ಅಂತರಂಗದ ಶಂಕೆಗಳನ್ನು ಪರಿಹರಿಸಿಕೊಳ್ಳಲು, ಅವಧಿಗೆ ತಕ್ಕಂತೆ ಅಧ್ಯಯನ ಪ್ಲಾನ್, ಪರೀಕ್ಷೆಗೆ ತಯಾರಾಗುವ ಬಗೆ, ಕಲಿಕೆ ಸುಧಾರಿಸಿಕೊಳ್ಳಲು ಸಲಹೆ, ಹೆಚ್ಚಿನ ಅಂಕಗಳಿಸಲು ಅನುಸರಿಸಬೇಕಾದ ಕ್ರಮಗಳು, ದೈಹಿಕ ಮತ್ತು ಮಾನಸಿಕ ದೃಢತೆ ಸಾಧಿಸಲು ಸಲಹೆಗಳು ಸೇರಿದಂತೆ ಅನೇಕ ಉಪಯುಕ್ತ ಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಗಿದೆ. ನೇರ ಫೋನ್ ಇನ್ ಕಾರ್ಯಕ್ರಮ ಸಂಪೂರ್ಣ ಯಶಸ್ವಿಯಾಗಿದೆ. ಒಂದು ಗಂಟೆಯಲ್ಲಿ 300ಕ್ಕೂ ಅಧಿಕ ವಿದ್ಯಾರ್ಥಿಗಳು ಕರೆ ಮಾಡಿ ಉತ್ತರ ಪಡೆದುಕೊಂಡಿದ್ದಾರೆ. ಕರೆ ಪ್ರಯತ್ನಿಸಿದವರಿಗೆಲ್ಲ ಮರು ಕರೆ ಮಾಡಿ ಉತ್ತರಿಸಲಾಗಿದೆ. ಸುಮಾರು ಐದು ನೂರು ಮಕ್ಕಳಿಗೆ ಹೊಸಪೇಟೆ ಸೇರಿದಂತೆ ಜಿಲ್ಲೆ ಹಾಗೂ ರಾಜ್ಯದ ನಾನಾ ಕಡೆಗಳಿಂದಲೂ ಮಕ್ಕಳು ಪ್ರಶ್ನೆಗಳನ್ನು ಕೇಳಿದ್ದಾರೆ. ಹಂಪಿ ಟೈಮ್ಸ್ ದಿನಪತ್ರಿಕೆ ಸಹಯೋಗದಲ್ಲಿ ನಡೆದ ಫೋನ್ ಇನ್ ಕಾರ್ಯಕ್ರಮ ವಿದ್ಯಾರ್ಥಿಗಳು ಮತ್ತು ಶಿಕ್ಷಕರಲ್ಲಿ ಹೊಸ ಚೈತನ್ಯ ಮೂಡಿಸಿದೆ. ಮೇ.9ರಂದು ಗೂಗಲ್ ಮೀಟ್ ಮೂಲಕ ವಿದ್ಯಾರ್ಥಿಗಳಿಗೆ ಮತ್ತಷ್ಟು ಪರೀಕ್ಷೆಗೆ ಟಿಪ್ಸ್ ನೀಡಲಾಗುವುದು.

– ಎಂ.ಚನ್ನಬಸಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ, ಹೊಸಪೇಟೆ.



ಶಿಕ್ಷಕ ನಾಗೇಂದ್ರ.ಕೆ



ಶಿಕ್ಷಕ ಶಶಿಧರ ಎ



ಶಿಕ್ಷಕ ನಾಗೇಂದ್ರ ಕೆ



ಶಿಕ್ಷಕ ಎಚ್.ತಿಮ್ಮಾರೆಡ್ಡಿ

■ ಹಂಪಿ ಟೈಮ್ಸ್ ಹೊಸಪೇಟೆ

ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯ ಹೊಸಪೇಟೆ ಮತ್ತು ಹಂಪಿ ಟೈಮ್ಸ್ ದಿನಪತ್ರಿಕೆ ಸಹಯೋಗದೊಂದಿಗೆ ಭಾನುವಾರ ನಗರದ ಸ.ಪ.ಪೂ.ಕಾಲೇಜ್ ಬಾಲಕಿಯರ ಪ್ರೌಢ ಶಾಲೆಯಲ್ಲಿ ಎಸ್‌ಎಸ್ ಎಲ್‌ಸಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ಫೋನ್ ಇನ್ ಕಾರ್ಯಕ್ರಮಕ್ಕೆ ವಿಜಯನಗರ ಜಿಲ್ಲೆ ಸೇರಿದಂತೆ ನಾಡಿನ ವಿವಿಧೆಡೆಗಳಿಂದ ನಿರೀಕ್ಷೆಗೂ ಮೀರಿ ವಿದ್ಯಾರ್ಥಿಗಳು ಕರೆ ಮಾಡಿ ತಜ್ಞ ಶಿಕ್ಷಕರಿಂದ ಪರಿಹಾರ ಕಂಡುಕೊಂಡರು.

ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲಾ ವಿದ್ಯಾರ್ಥಿಗಳು ಕರೆ ಮಾಡಿದ್ದರು. ಒಂದು ಗಂಟೆಯಲ್ಲಿ ಬಿಡುವಿಲ್ಲದೆ ನಿರಂತರವಾಗಿ ಬಂದ 300ಕ್ಕೂ ಅಧಿಕ ವಿದ್ಯಾರ್ಥಿಗಳ ಕರೆಗಳಿಗೆ ವಿಷಯ ಶಿಕ್ಷಕರು ಸಮಾಧಾನದಿಂದ ಉತ್ತರಿಸಿ, ವಿದ್ಯಾರ್ಥಿಗಳಲ್ಲಿದ್ದ ಅನೇಕ ಗೊಂದಲಗಳಿಗೆ ಪರಿಹಾರ ಸೂಚಿಸಿ ಮಕ್ಕಳನ್ನು ಮತ್ತಷ್ಟು ಓದಿನತ್ತ ಮುಖಮಾಡುವಂತೆ ಹುರಿದುಂಬಿಸಿದರು.

ಭಾನುವಾರ ರಜೆ ದಿನವಾಗಿದ್ದರೂ ಶಿಕ್ಷಕರು ತಮ್ಮೆಲ್ಲಾ ಕೆಲಸಗಳನ್ನು ಬದಿಗೊತ್ತಿ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ದಿನದ ಸಮಯವನ್ನು ಫೋನ್ ಇನ್ ಕಾರ್ಯಕ್ರಮಕ್ಕೆ ಮೀಸಲಿಟ್ಟಿದ್ದು ವಿಶೇಷವಾಗಿತ್ತು. ಅಲ್ಲದೇ ಪತ್ರಿಕೆ ಓದುಗರ ಮತ್ತು ಪಾಲಕರ ಮೆಚ್ಚುಗೆಗೆ ಪಾತ್ರರಾದರು.

ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ, ಕಂಪ್ಲಿ, ರಾಜ್ಯದ ರಾಜಧಾನಿ ಬೆಂಗಳೂರು, ಧಾರವಾಡ, ದಾವಣಗೆರೆ, ಚಿತ್ರದುರ್ಗ, ಗುಲ್ಬರ್ಗಾ, ವಿವಿಧ ಜಿಲ್ಲೆಗಳಿಂದಲೂ ಕರೆ ಬಂದಿರುವುದು ಶಿಕ್ಷಕರಲ್ಲಿ ಹರ್ಷ ಇಮ್ಮಡಿ ಗೊಳಿಸಿತು.

ಕನ್ನಡ ವಿಷಯಕ್ಕೆ ಟಿಬಿಡ್ಯಾಂ ಸ.ಪ.ಪೂ. ಕಾ. (ಪ್ರೌ.ಶಾ.ವಿ) ಶಿಕ್ಷಕ ಮಲ್ಲಿಕಾರ್ಜುನ, ಬುಕ್ಕಸಾಗರದ ಸ.ಪ್ರೌ.ಶಾಲೆಯ ಶಿಕ್ಷಕ ರವಿ.ಆರ್., ಗಣಿತ ವಿಷಯಕ್ಕೆ ಆದರ್ಶ ವಿದ್ಯಾಲಯದ ಶಶಿಧರ.ಎ ಮತ್ತು ಬೈಲುವದ್ದಿಗೇರಿ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ನಾಗೇಂದ್ರ..ಕೆ, ಇಂಗ್ಲೀಷ್ ವಿಷಯಕ್ಕೆ ಕಮಲಾಪುರ ಸರ್ಕಾರಿ ಪ.ಪೂ. ಕಾಲೇಜ್ ಬಾಲಕರ ಪ್ರೌಢಶಾಲೆಯ ಶಿಕ್ಷಕ ಶಾಮೀದಲಿ, ಬಾಲಕಿಯರ ಪ್ರೌಢಶಾಲೆ (ಮಾ.ಪು) ಶಿಕ್ಷಕ ಎಚ್.ತಿಮ್ಮಾರೆಡ್ಡಿ, ವಿಜ್ಞಾನ ವಿಷಯಕ್ಕೆ ಬಾಲಕಿಯರ ಪ್ರೌಢಶಾಲೆ (ಮಾ.ಪು) ಶಿಕ್ಷಕಿ ವಿ.ಮಾಧವಿ ಹಾಗೂ ಸ.ಪ.ಪೂ.ಕಾಲೇಜ್ ಬಾಲಕಿಯರ (ಪ್ರೌ.ವಿ.) ಶಿಕ್ಷಕಿ ವಿ.ಶಿವಮ್ಮ, ಆದರ್ಶ ವಿದ್ಯಾಲಯದ ಶಿಕ್ಷಕಿ ಆಯೇಷಾ ಬೇಗಂ, ಹಿಂದಿ ವಿಷಯಕ್ಕೆ ಬಾಲಕಿಯರ ಪ್ರೌಢಶಾಲೆ (ಮಾ.ಪು) ನಾಗರಾಜ.ಬಿ, ಟಿಬಿಡ್ಯಾಂ ಸ.ಪ.ಪೂ.ಕಾ. (ಪ್ರೌ.ಶಾ.ವಿ) ಶಿಕ್ಷಕ ಅಬ್ದುಲ್ ಕಲಾಂ, ಸಮಾಜ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಕಾರಿಗನೂರು ಪ್ರೌಢ ಶಾಲೆಯ ಶಿಕ್ಷಕ ಬಿ.ಎನ್.ಶಿವಪ್ರಸಾದ, ಆದರ್ಶ ವಿದ್ಯಾಲಯದ ಸಿದ್ದಪ್ಪ, ಚಿತ್ತವಾಡ್ಗಿ ಪ್ರೌಢಶಾಲೆಯ ಶಿಕ್ಷಕಿ ಕುರುಬರ ನಾರಾಯಣಮ್ಮ ಅತ್ಯುತ್ಸಾಹದಿಂದ ಪಾಲ್ಗೊಂಡು ಮಕ್ಕಳ ಕೇಳುವ ಎಲ್ಲಾ ಪ್ರಶ್ನೆಗಳಿಗೂ ಅರ್ಥವಾಗುವ ನಿಟ್ಟಿನಲ್ಲಿ ಸರಳ ಟಿಪ್ಸ್ ಗಳ ಮೂಲಕ ವಿವರಿಸಿದರು. ಗಣಿತ ವಿಷಯದಲ್ಲಿ ಸೂತ್ರಗಳನ್ನು ನೆನಪಿಟ್ಟುಕೊಳ್ಳುವ ಬಗ್ಗೆ, ಪ್ರಮೇಯಗಳನ್ನ ಮತ್ತು ಅನ್ವಯಿಕ ಪ್ರಶ್ನೆಗಳನ್ನು ಹಂತಹಂತವಾಗಿ ಬಿಡಿಸುವ ಬಗೆಯನ್ನು ಸೂಚಿಸಿದರು.

ಕೆಮಿಕಲ್ ಇಕ್ವೇಷನ್, ವಿಜ್ಞಾನದ ಚಿತ್ರಗಳನ್ನು ಸರಳವಾಗಿ ಬಿಡಿಸುವ ಕ್ರಮಗಳನ್ನು ತಿಳಿಸಿಕೊಟ್ಟರು. ಕನ್ನಡದಲ್ಲಿ ವ್ಯಾಕರಣಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು, ಪೂರ್ಣ ಪ್ರಮಾಣದ ಅಂಕ ಗಳಿಸುವ ಬಗೆ, ಓದಿದ್ದನ್ನು ನೆನಪಿನಲ್ಲಿಟ್ಟುಕೊಳ್ಳುವ ಬಗೆ, ಪ್ರಬಂಧಗಳು, ಪತ್ರ ಲೇಖನ ಹೀಗೆ ವಿವಿಧ ಬಗೆಯ ಹತ್ತಾರು ಪ್ರಶ್ನೆಗಳನ್ನು ವಿದ್ಯಾರ್ಥಿಗಳು ಕೇಳಿ ಗೊಂದಲಗಳನ್ನ ನಿವಾರಿಸಿಕೊಂಡರು. ಅತ್ಯಧಿಕ ಪಾಠಗಳನ್ನು ಹೊಂದಿರುವ ಸಮಾಜ ವಿಜ್ಞಾನ ವಿಷಯವನ್ನು ನೆನಪಿಟ್ಟುಕೊಳ್ಳುವ ಬಗೆ ಮತ್ತು ಪರೀಕ್ಷೆಗೆ ಓದಲೇ ಬೇಕಾದ ಪಠ್ಯಗಳನ್ನು ತಿಳಿಸಿದರು. ಇಂಗ್ಲಿಷ್ ವಿಷಯದಲ್ಲು ಸ್ಟೋರಿ ಡೆವಲಪ್‌ಮೆಂಟ್, ಗ್ರಾಮರ್, ಎಕ್ಸ್ಟ್ರಾಕ್ಟ್ಸ್ ಮತ್ತು ಎಸ್ಸೆ, ಇಫ್‌ಕ್ಲಾಜ್ ಸೇರಿದಂತೆ ಅನೇಕ ಪ್ರಶ್ನಗಳಿಗೆ ವಿದ್ಯಾರ್ಥಿಗಳು ಉತ್ತರ ಪಡೆದುಕೊಂಡರು.

ಎಸ್ಸೆಸ್ಸೆಲ್ಸಿ ನೂಡಲ್ ಅಧಿಕಾರಿ ಎಚ್. ಶಿವರಾಮಪ್ಪ, ಶಿಕ್ಷಣ ಸಂಯೋಜಕ ರಾಜು.ಎಂ. ನಿರ್ವಹಿಸಿದರು.


ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
SSLC ವಿದ್ಯಾರ್ಥಿಗಳಿಗಾಗಿ
ಹೈಸ್ಕೋರ್ ಮತ್ತು ಸರಳ ಅಭ್ಯಾಸಕ್ಕೆ ತಜ್ಞ ಶಿಕ್ಷಕರಿಂದ ಸುಲಭ ಅಂಶಗಳು ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ
scan to read epaper
9 ಜುಲೈ 2024 ರಿಂದ ಪ್ರತಿದಿನ
ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಇನ್ಸ್ಟಾಲ್ ಮಾಡಿಕೊಳ್ಳಿ!




ಶಿಕ್ಷಕ ಸಿದ್ದಪ್ಪ



ಶಿಕ್ಷಕ ಅಬ್ದುಲ್ ಕಲಾಂ

ವಿದ್ಯಾರ್ಥಿಗಳೊಂದಿಗೆ ಫೋನ್‌ಇನ್ ಕಾರ್ಯಕ್ರಮ ವಿನೂತನ ಅನುಭವ ನೀಡಿದೆ. ಮಕ್ಕಳು ಉತ್ಸುಕತೆಯಿಂದ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವ ಜೊತೆಗೆ ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬಲು ಅವಕಾಶ ಸಿಕ್ಕಿತು. ಹಂಪಿ ಟೈಮ್ಸ್ ದಿನಪತ್ರಿಕೆ ವರ್ಷದ ಆರಂಭ ದಿಂದಲೂ ಮಕ್ಕಳಿಗೆ ಉಪಯುಕ್ತ ಎಸ್ಸೆಸ್ಸೆಲ್ಸಿ ಪ್ರಶ್ನೋತ್ತರ ಪ್ರಕಟಿಸಿ, ವಿದ್ಯಾರ್ಥಿಗಳ ಫಲಿತಾಂಶ ಹೆಚ್ಚಿಸಲು ಬಲ ತುಂಬಿದೆ. ಹಿಂದುಳಿದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ನಿರಂತರವಾಗಿ ಶ್ರಮಿಸುತ್ತಿರುವ ಪತ್ರಿಕಾ ಬಳಗದ ಕಾರ್ಯ ಶ್ಲಾಘನೀಯ. ಶೈಕ್ಷಣಿಕ ಕ್ಷೇತ್ರದಲ್ಲಿ ಇದೊಂದು ಮೈಲುಗಲ್ಲು.

ಫೋನ್ ಇನ್ ಮಾರ್ಗದರ್ಶಿ ಶಿಕ್ಷಕರು
ಹೊಸಪೇಟೆ.



ಶಿಕ್ಷಕ ಶಾಮೀದಲಿ



ಶಿಕ್ಷಕಿ ಕೆ.ನಾರಾಯಣಮ್ಮ



ಶಿಕ್ಷಕಿ ವಿ.ಮಾಧವಿ





ಶಿಕ್ಷಕ ನಾಗರಾಜ ಬಿ.

## ಬೆಳಕಿನ ಹಾದಿ

# ಉತ್ತಮ ಬದುಕಿಗೆ ದೂರ ದೃಷ್ಟಿಯ ಅಗತ್ಯ

ಬದುಕಿನಲ್ಲಿ ಅಭಿವೃದ್ಧಿ ಹೊಂದಲು, ಸಾಧನೆಗೈಯಲು ಪ್ರತಿಯೊಬ್ಬ ವ್ಯಕ್ತಿಯು ದೂರ ದೃಷ್ಟಿಯನ್ನು ಇಟ್ಟುಕೊಂಡು ಮಹತ್ತರವಾದ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಗತ್ಯವಿದೆ. ನಮಗೆ ಸಮಸ್ಯೆಗಳು ಎದುರಾದಾಗ ದೂರ ದೃಷ್ಟಿಯನ್ನು ಇಟ್ಟುಕೊಂಡು ಅದನ್ನು ಬಗೆಹರಿಸಿಕೊಂಡರೆ ಶಾಶ್ವತ ಪರಿಹಾರ ಸಿಗುತ್ತದೆ, ಉತ್ತಮವಾದ ಬದುಕಿಗೆ ನಾಂದಿಯಾಗುತ್ತದೆ.



ದೂರ ದೃಷ್ಟಿ ಇಟ್ಟುಕೊಂಡು ನಾವು ಮಾಡುವ ಕೆಲಸವೂ ನಮ್ಮ ಗುರಿಯನ್ನು ತಲುಪಲು ಸಹಾಯವಾಗುತ್ತದೆ. ಉತ್ತಮ ನಾಯಕನಿಗೆ ದೂರ ದೃಷ್ಟಿಯು ಚೆನ್ನಾಗಿದ್ದರೆ ರಾಜ್ಯವು ಉತ್ತಮವಾಗಿರುತ್ತದೆ ಹಾಗೆಯೇ ಪ್ರಜೆಗಳ ಜೀವನವು ಉತ್ತಮವಾಗಿರುತ್ತದೆ. ನಾಯಕನಿಗೆ ಹಾಗೂ ಆಡಳಿತಗಾರನಿಗೆ ದೂರದೃಷ್ಟಿ ಅತ್ಯಗತ್ಯ. ಉದಾಹರಣೆಗೆ ಮಹಾತ್ಮ ಗಾಂಧೀಜಿಯವರು ದೂರ ದೃಷ್ಟಿಯನ್ನು ಇಟ್ಟುಕೊಂಡು ಸತ್ಯ ಮತ್ತು ಅಹಿಂಸ ಮಾರ್ಗವನ್ನು ಅನುಸರಿಸಿದ ಪರಿಣಾಮವಾಗಿ ಭಾರತಕ್ಕೆ ಸ್ವಾತಂತ್ರ್ಯ ದಕ್ಕಿತು.

ಶ್ರೀಯುತ ಎಸ್‌ಎಂ ಕೃಷ್ಣ ರವರು ದೂರದೃಷ್ಟಿಯಿಟ್ಟುಕೊಂಡು ತೆಗೆದುಕೊಂಡು ತೀರ್ಮಾನದಿಂದಲೇ ನಮ್ಮ ಬೆಂಗಳೂರು ಭಾರತದ ಟೆಕ್ ರಾಜಧಾನಿಯಾಗಲೂ ಹಾಗೂ ಐ ಟಿ ಯಶಸ್ಸಿಗೆ ಅಡಿಪಾಯ ಹಾಕಿತು ಹಾಗೆಯೇ ವಿದ್ಯಾರ್ಥಿಗಳು ಭವಿಷ್ಯದ ದೂರದೃಷ್ಟಿಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಚೆನ್ನಾಗಿ ಓದಿ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ ಒಳ್ಳೆಯ ಉದ್ಯೋಗಕ್ಕೆ ಸೇರಿಕೊಂಡರೆ ಅವರ ಜೀವನವು ಉತ್ತಮ ಗತಿಯಲ್ಲಿ ಸಾಗುತ್ತದೆ.

ಇನ್ನು ಹಣಕಾಸಿನ ವಿಚಾರದಲ್ಲೂ ಅಷ್ಟೇ, ಇಂದು ನಮಗೆ ಉತ್ತಮವಾದ ಸಂಬಳ ಬರುತ್ತಿದೆ, ಹಣಕಾಸಿನ ವಿಚಾರದಲ್ಲಿ ಶಕ್ತರಾಗಿ ಚೆನ್ನಾಗಿದ್ದೇವೆ ಎಂದುಕೊಂಡು ನಾಳೆಯ ಬಗ್ಗೆ ಯೋಚಿಸದೆ ಬೇಕಾಬಿಟ್ಟಿ ಖರ್ಚು ಮಾಡಿದರೆ ನಮ್ಮ ಮುಂದಿನ ಜೀವನ ಅಯೋಮಯವಾಗಿರುತ್ತದೆ. ಹಾಗಾಗಿ ನಮ್ಮ ಉತ್ತಮವಾದ ನಾಳೆಗಾಗಿ ದೂರ ದೃಷ್ಟಿಯಿಂದ ಹಣವನ್ನು ಉಳಿತಾಯ ಮಾಡುತ್ತಾ, ಉತ್ತಮವಾದ ಯೋಜನೆಗಳಿಗೆ ಹಣವನ್ನು ವಿನಿಯೋಗಿಸಿ, ಮೀಸಲಾಗಿಟ್ಟು, ಹಿತಮಿತವಾಗಿ ಖರ್ಚು ಮಾಡುತ್ತಾ ಬದುಕಿದರೆ ಜೀವನವು ಉತ್ತಮವಾಗಿರುತ್ತದೆ. ಮುಂದಿನ ಭವಿಷ್ಯವು ಉಜ್ವಲವಾಗಿರುತ್ತದೆ. ಹಾಗಾಗಿ ಉತ್ತಮ ಬದುಕಿಗೆ ದೂರ ದೃಷ್ಟಿಯು ಅತ್ಯಗತ್ಯವಾಗಿದೆ.

ಭಗವಾನ್ ಶ್ರೀ ಕೃಷ್ಣ ದುರ್ಯೋಧನನ ಅಹಂಕಾರ ಮತ್ತು ದುರಾಸೆಯ ಪರಮಾವಧಿಯ ಅರಿವಿದ್ದರೂ ಯುದ್ಧದಿಂದಾಗುವ ಪರಿಣಾಮವನ್ನು ಮನಸ್ಸಿನಲ್ಲಿಟ್ಟುಕೊಂಡು ದೂರ ದೃಷ್ಟಿಯಿಂದ ಪ್ರಜೆಗಳ ಹಿತಕ್ಕಾಗಿ ಶಾಂತಿದೂತನಾಗಿ ಕೌರವರ ಬಳಿಗೆ ಹೋಗಿ ಸಂಧಾನವನ್ನು ಮಾಡಲು ಪ್ರಯತ್ನಿಸುತ್ತಾನೆ. ಆದರೆ ದೂರ ದೃಷ್ಟಿಯ ವಿವೇಚನೆ ಇಲ್ಲದೆ ದುರ್ಯೋಧನನ ಹಠದಿಂದಾಗಿ ಯುದ್ಧ ಅನಿವಾರ್ಯವಾಗುತ್ತದೆ.

ದೂರ ದೃಷ್ಟಿ ಇಲ್ಲದೆ ಮಾಡಿದ ಯಾವ ಕಾರ್ಯಕ್ಕೂ ಯಶಸ್ಸು ಸಿಗುವುದಿಲ್ಲ. ಹಸಿದ ಇಲಿಯೊಂದು ಆಹಾರವೇ ಸಿಕ್ಕದೆ ಹಸಿವೆಯಿಂದ ತತ್ತರಿಸಿ ಹೋಗಿತ್ತು. ಅದು ಆಹಾರ ಹುಡುಕಲು ಹೊರಟಾಗ ಸಣ್ಣ ರಂಧ್ರವಿರುವ ಮಣ್ಣಿನ ಗಡಿಗೆಯೊಂದು ಕಾಣಿಸಿತು. ಈ ಗಡಿಗೆಯೊಳಗೆ ಆಹಾರ ಏನಾದರೂ ಸಿಗಬಹುದು ಎಂದುಕೊಂಡು ಆ ರಂಧ್ರದ ಮೂಲಕ ಒಳಗೆ ಧಾವಿಸಿತು. ಅದರಲ್ಲಿ ಆಹಾರ ಧಾನ್ಯಗಳಿದ್ದವು ಹಸಿವೆಯಿಂದ ಬಳಲಿದ್ದ ಇಲಿ ಧಾನ್ಯವನ್ನು ನೋಡಿದೊಡನೆ ಒಂದೇ ಸಮನೆ ತಿನ್ನಲು ಶುರು ಮಾಡಿತು. ಹಸಿವೆ ನೀಗಿದರು ಧಾನ್ಯ ಸಿಕ್ಕ ಸಂತೋಷದಲ್ಲಿ ಮತ್ತಷ್ಟು ತಿಂದಿತು. ಸಣಕಲಾಗಿದ್ದ ಇಲಿಯ ಹೊಟ್ಟೆಯು ಧಾನ್ಯವನ್ನು ಅತಿಯಾಗಿ ತಿಂದು, ಹೊಟ್ಟೆಯ ಗಾತ್ರ ದೊಡ್ಡದಾಯಿತು. ಆ ಇಲಿಗೆ ದೂರದೃಷ್ಟಿಯೇ ಇರಲಿಲ್ಲ ಅಗತ್ಯಕ್ಕಿಂತ ಹೆಚ್ಚಾಗಿ ತಿಂದರೆ ತನ್ನ ಹೊಟ್ಟೆಯ ಗಾತ್ರ ಹೆಚ್ಚಾಗಿ ಆ ಸಣ್ಣ ರಂಧ್ರದಿಂದ ಹೊರ ಹೋಗಲಾರೆ ಎಂದು ಯೋಚಿಸಲೇ ಇಲ್ಲ. ದೂರ ದೃಷ್ಟಿ ಇಲ್ಲದೆ ಮಾಡಿದ ಕೆಲಸದಿಂದಾಗಿ ಇಲಿಗೆ ಮಣ್ಣಿನ ಗಡಿಗೆಯಿಂದ ಹೊರಬರಲು ಸಾಧ್ಯವೇ ಆಗಲಿಲ್ಲ.

ಹೀಗೆ ನಾವು ಬದುಕಿನಲ್ಲಿ ದೂರದೃಷ್ಟಿ ಇಲ್ಲದೆ ಯಾವ ಕೆಲಸವನ್ನು ಮಾಡಿದರೂ ಉನ್ನತವಾಧ ಜೀವನವನ್ನು ನಡೆಸಲು ಸಾಧ್ಯವಿಲ್ಲ. ಹಾಗಾಗಿ ಬದುಕಿನಲ್ಲಿ ದೂರದೃಷ್ಟಿಯಿದ್ದರೆ, ಎಲ್ಲರ ದೃಷ್ಟಿಯು ನಮ್ಮ ಕಡೆ ಬೀಳುವುದರಲ್ಲಿ ಸಂಶಯವೇ ಇಲ್ಲ.

ಶ್ರೀ ಕೃಷ್ಣನ ದೂರದೃಷ್ಟಿಯು ಧರ್ಮ ಸಂಸ್ಥಾಪನೆಗೆ ಕಾರಣವಾಯಿತು. ಕೃಷ್ಣನು ಅರ್ಜುನನಿಗೆ ನೀಡಿದ ಭಗವದ್ಗೀತೆಯ ಉಪದೇಶವೂ ಯುದ್ಧಕ್ಕೆ ಮಾತ್ರ ಸೀಮಿತವಲ್ಲ. ಅದು ನಿತ್ಯ ಜೀವನದ ಎಲ್ಲಾ ಮಜಲುಗಳಲ್ಲೂ ಅನ್ವಯವಾಗುತ್ತದೆ. ಧೀರ್ಘಕಾಲದ ಪರಿಣಾಮವನ್ನು ಗಮನಿಸಿ, ದೂರ ದೃಷ್ಟಿಯಿಂದ ನಿರ್ಧಾರವನ್ನು ತೆಗೆದುಕೊಂಡರೆ ನಮ್ಮ ಜೀವನದಲ್ಲಿ ಉನ್ನತಿಯನ್ನು ಕಾಣಲು ಸಾಧ್ಯವಾಗುತ್ತದೆ.

**– ಚೇತನ ಭಾರ್ಗವ, ಬೆಂಗಳೂರು**

## ನೀವೂ ಬರೆಯಬಹುದು

ಹಂಪಿ **ಟೈಮ್ಸ್** ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಹ್ಯಾಪಿಯಾಗಿದೆ...ಹ್ಯಾಪಿಯಾಗಿದೆ.....



ಸಂತೋಷ ವಾಗಿರುವುದು ಯಾರಿಗೆ ತಾನೇ ಇಷ್ಟವಿರುವುದಿಲ್ಲ ಹೇಳಿ ? ಇದು ಸಂತೃಪ್ತಿ ಮತ್ತು ಭಾವನಾತ್ಮಕ ಯೋಗಕ್ಷೇಮದ ಸ್ಥಿತಿ. ನಾವು ಸಂತೋಷವಾಗಿರುವಾಗ ನಗುತ್ತಿರುವ ಮತ್ತು ಸಕಾರಾತ್ಮಕ ಘಟನೆಗಳನ್ನು ಆಚರಿಸುವ ಮೂಲಕ ಕೃತಜ್ಞತೆಯನ್ನು ತೋರಿಸುತ್ತೇವೆ ಇದು ಅಪೇಕ್ಷಣೀಯ ಉತ್ತಮ ಭಾವನೆಯಾಗಿದೆ. ಒಳ್ಳೆಯ ಸಂದರ್ಭ, ಸಾಧನೆಗಳು ಮತ್ತು ಇತರೆ ಸಕಾರಾತ್ಮಕ ಅನುಭವಗಳಂತಹ ವಿವಿಧ ಅಂಶಗಳಿಂದ ಸಂತೋಷ ಪ್ರಭಾವಿತವಾಗಿರುತ್ತದೆ.

**ಸಂತೋಷದ ಮೇಲೆ ಪರಿಣಾಮ ಬೀರುವ ಅಂಶಗಳು**

**1.ನಿದ್ರೆಯ ಅಭ್ಯಾಸಗಳು**

ನಿದ್ರೆ ಮಾನಸಿಕ ಸ್ಥಿತಿ ಮತ್ತು ಸಂತೋಷದ ಮೇಲೆ ಪರಿಣಾಮ ಬೀರುತ್ತದೆ ಉತ್ತಮ ರಾತ್ರಿಯ ನಿದ್ರೆಯು ಹರ್ಷ ಚಿತ್ತದಿಂದ ಬೆಳಿಗ್ಗೆ ಮತ್ತು ಉಳಿದ ದಿನದ ಸಕಾರಾತ್ಮಕ ಮನೋಭಾವವನ್ನು ಖಾತ್ರಿ ಪಡಿಸುತ್ತದೆ ಆರೋಗ್ಯ ಪೂರ್ಣ ನಿದ್ರೆ ವ್ಯಕ್ತಿಯ ಆಕರ್ಷಣೆ ಮೇಲೆ ಪ್ರಭಾವ, ತೃಪ್ತಿಯ ಭಾವನೆ ಉಂಟಾಗುತ್ತದೆ. ವ್ಯಕ್ತಿಯ ಪರಿಣಾಮಕಾರತ್ವ ಮತ್ತು ಉತ್ಪಾದಕತೆಯನ್ನು ಸುಧಾರಿಸಿ ಹೆಚ್ಚಿನ ಯಶಸ್ಸು,ಸಾಧನೆಗಳು ಮತ್ತು ಸಂತೋಷದ ಭಾವನೆಗಳಿಗೆ ಇದು ಕಾರಣವಾಗುತ್ತದೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful HAMPI TIMES E-paper

**2.ಬೆಂಬಲ**

ವ್ಯಕ್ತಿ ತನ್ನ ಸುತ್ತಲೂ ಹೊಂದಿರುವ ಬೆಂಬಲದ ವ್ಯವಸ್ಥೆ ಸಂತೋಷದ ಮಟ್ಟದ ಮೇಲೆ ಪರಿಣಾಮ ಬೀರುತ್ತದೆ ಕುಟುಂಬ,ನೆರೆಹೊರೆ ಮತ್ತು ಸ್ನೇಹಿತರ ಜೊತೆಗಿನ ಬಾಂಧವ್ಯ ಸಂತೋಷ ಹೆಚ್ಚಿಸುತ್ತದೆ ಆರೋಗ್ಯ ಪೂರ್ಣ ಸಂಪರ್ಕ ಬಲವಾದ ಸಂಬಂಧವನ್ನು ಹೆಚ್ಚಿಸಿ ಸಂತೋಷ ಉಂಟು ಮಾಡುತ್ತದೆ. ಬೆಂಬಲ ಹೊಂದಿರುವಾಗ ಒತ್ತಡದ ಸಂದರ್ಭಗಳು ಸಂಭವಿಸುವ ಸಾಧ್ಯತೆ ಕಡಿಮೆ ಧನಾತ್ಮಕತೆಯು ಹೆಚ್ಚಾಗಿರುತ್ತದೆ.

**3.ದೈಹಿಕ ಮತ್ತು ಮಾನಸಿಕ ಆರೋಗ್ಯ**

ಸಂತೋಷ ದೈಹಿಕ ಮತ್ತು ಮಾನಸಿಕ ಆರೋಗ್ಯದಿಂದ ಗಮನಾರ್ಹವಾಗಿ ಪ್ರಭಾವಿತವಾಗಿದ್ದು ಆರೋಗ್ಯವಂತ ವ್ಯಕ್ತಿಯು ತೃಪ್ತನಾಗಿರುತ್ತಾನೆ ಏಕೆಂದರೆ ಅವರು ಅನಾರೋಗ್ಯ ಅಥವಾ ನೋವಿನ ಬಗ್ಗೆ ಚಿಂತಿಸಬೇಕಾಗಿಲ್ಲ ಒಬ್ಬ ವ್ಯಕ್ತಿಯ ಮಾನಸಿಕ ಸ್ಥಿತಿಯು ಆರೋಗ್ಯವಾಗಿ ರುವಾಗ ಶಾಂತಿಯಿಂದ ಕೂಡಿರುತ್ತದೆ ಏಕೆಂದರೆ ಅವರು ಸಾಯುವ ಅಥವಾ ಯಾವುದೇ ಇತರ ಆರೋಗ್ಯ ಸಮಸ್ಯೆಗಳ ಬಗ್ಗೆ ಭಯ ಅವರಲ್ಲಿ ಇರುವುದಿಲ್ಲ.

**4.ಸಂವಹನ**

ಸಂತೋಷವು ಸಂವಹನದ ಮೇಲೆ ಅವಲಂಬಿತವಾಗಿದೆ ಸಮಸ್ಯೆಯನ್ನು ಪರಿಹರಿಸಲು ಇದು ಸಹಕಾರಿ ಮತ್ತು ಜೀವನದ ಒತ್ತಡಗಳನ್ನು ಕಡಿಮೆ ಮಾಡುತ್ತದೆ ಪರಿಹಾರವನ್ನು ಕಂಡುಕೊಂಡ ನಂತರ ಪ್ರೀತಿ ಪಾತ್ರದೊಂದಿಗೆ ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ಯೋಗಕ್ಷೇಮದ ಸ್ಥಿತಿಯನ್ನು ರಚಿಸಲಾಗುತ್ತದೆ.

ಸಂತೋಷ ಪಡೆಯುವುದೇಗೆ?

ಶಾಂತ ಮನಸ್ಥಿತಿ ಹೊಂದುವುದು ಸಂತೋಷದ ಮಾನಸಿಕ ಪೂರ್ವ ಸಿದ್ಧತೆಯಾಗಿದೆ ಮನಸ್ಸು ಮುಕ್ತ ಸ್ಥಿತಿಯಲ್ಲಿರಲು ಮಾನಸಿಕ ಒತ್ತಡ ಇರಬಾರದು ಜೊತೆಗೆ ಉತ್ತಮ ನಿದ್ರೆ ಅವಶ್ಯ ಇದು ಮಾನಸಿಕ ಸ್ಥಿತಿಯನ್ನು ಕಾಪಾಡಿಕೊಳ್ಳಲು ಸಹಾಯಕ.

ವೈಯಕ್ತಿಕ ಗುರಿಗಳನ್ನು ಪೂರ್ಣಗೊಳಿಸುವುದು ಜನರು ಸಂತೋಷವನ್ನು ಕಂಡುಕೊಳ್ಳುವ ಇನ್ನೊಂದು ಮಾರ್ಗವಾಗಿದೆ. ಯಶಸ್ಸು ಯಾವಾಗಲೂ ಸಂತೋಷದಿಂದ ಕೂಡಿರುತ್ತದೆ ಮತ್ತು ಎರಡೂ ಭಾವನೆಗಳು ವಿಜಯ ಮತ್ತು ನೆರವೇರಿಕೆಯ ಭಾವನೆಗಳನ್ನು ತಿಳಿಸುತ್ತವೆ.

ಬೆಂಬಲ ವ್ಯವಸ್ಥೆಯೊಂದಿಗೆ ಸಂತೋಷವು ಹೆಚ್ಚಾಗುತ್ತದೆ ಅದು ನಿಮ್ಮ ದಿನನಿತ್ಯದ ಜೀವನದಲ್ಲಿ ಉತ್ತಮ ಪರಿಣಾಮವನ್ನು ಬೀರುತ್ತದೆ.

ಜೀವನದಲ್ಲಿ ವೈಯಕ್ತಿಕ ತೃಪ್ತಿಯನ್ನು ಸಕ್ರಿಯಗೊಳಿಸಲು ಒಬ್ಬ ವ್ಯಕ್ತಿಯು ತನ್ನನ್ನು ತಾನೇ ಆದ್ಯತೆ ಮಾಡಿಕೊಳ್ಳಬೇಕು ಮತ್ತು ಧನಾತ್ಮಕ ಸ್ವಯಂ–ಗ್ರಹಿಕೆಯನ್ನು ಹೊಂದಿರಬೇಕು.

ಸಂತೋಷದ ನಿಜವಾದ ಅನ್ವೇಷಣೆಯು ನಿಮ್ಮ ಅಗತ್ಯತೆಗಳನ್ನು ಮತ್ತು ಇತರ ಜನರು ಅಥವಾ ವಸ್ತುಗಳ ಮುಂದೆ ಇಡುವುದನ್ನು ಒಳಗೊಂಡಿರುತ್ತದೆ.

ಜನರು ಆಗಾಗ್ಗೆ ನಮ್ಮನ್ನು ಜೀವನದಲ್ಲಿ ನಿರಾಸೆಗೊಳಿಸುತ್ತಾರೆ ಮತ್ತು ಅವರಿಗೆ ಹೆಚ್ಚಿನ ಆದ್ಯತೆ ನೀಡುವುದು ಯಾವಾಗಲೂ ನಮಗೆ ಕಡಿಮೆ ಸಂತೋಷವನ್ನು ನೀಡುತ್ತದೆ ಹಾಗೂ ಸ್ವಯಂ–ಸ್ವೀಕಾರ ಮತ್ತು ಸ್ವಯಂ–ಪ್ರೀತಿಯ ಅಭ್ಯಾಸವು ಮತ್ತೊಂದು ಕಲ್ಪನೆಯಾಗಿದೆ.

ಯಾರಾದರೂ ತಮ್ಮ ಆಲೋಚನೆಗಳ ಮೇಲೆ ಸ್ವಯಂ ನಿಯಂತ್ರಣ ಹೊಂದಿರಬೇಕು.

ಒಬ್ಬರ ದೈಹಿಕ ಮತ್ತು ಮಾನಸಿಕ ಆರೋಗ್ಯದ ಸ್ಥಿತಿಯು ಅವರ ಸಂತೋಷದ ಮಟ್ಟವನ್ನು ಗಣನೀಯವಾಗಿ ಪ್ರಭಾವಿಸುತ್ತದೆ.

ಆಲೋಚನೆಗಳು ಶಾಂತಿಯಿಂದ ಇದ್ದಾಗ,ಒಬ್ಬನು ಶಾಂತ ಮನಸ್ಥಿತಿಯನ್ನು ಪಡೆಯಬಹುದು.

ನಿಮಗೆ ಒತ್ತಡವನ್ನುಂಟುಮಾಡುವ ಯಾವುದನ್ನಾದರೂ ತಪ್ಪಿಸಬೇಕು ಎಂದು ಸಲಹೆ ನೀಡಲಾಗುತ್ತದೆ.

ಸಂವಹನವು ಸಂತೋಷಕ್ಕಾಗಿ ಅತ್ಯಗತ್ಯ ಏಕೆಂದರೆ ಇದು ಸಮಸ್ಯೆಯನ್ನು ಪರಿಹರಿಸುವುದನ್ನು ಸುಲಭಗೊಳಿಸುತ್ತದೆ ಮತ್ತು ಕಡಿಮೆ ಅಹಿತಕರವಾಗಿರುತ್ತದೆ.

ಸನ್ನಿವೇಶಗಳು ಸಂತೋಷವನ್ನು ನಿರ್ಧರಿಸುವುದರಿಂದ ಜನರು ತಮ್ಮ ಸುತ್ತಮುತ್ತಲಿನ ಪ್ರದೇಶಗಳನ್ನು ಆಯ್ಕೆ ಮಾಡಿಕೊಳ್ಳಲು ಮತ್ತು ದುಃಖವನ್ನುಂಟು ಮಾಡುವವರನ್ನು ಬಿಡಲು ಸ್ವಾತಂತ್ರ್ಯವನ್ನು ಹೊಂದಿದ್ದಾರೆ.

ಒಟ್ಟಾರೆಯಾಗಿ,ಸಂತೋಷ ದೈನಂದಿನ ಜೀವನ ಮತ್ತು ಭಾವನೆಗಳ ಮೇಲೆ ಪರಿಣಾಮ ಬೀರುವ ಮಹತ್ವದ ಭಾವನೆಯಾಗಿದೆ.

ವ್ಯಕ್ತಿಗಳು ತಮ್ಮ ಸಂತೋಷದ ಮಟ್ಟವನ್ನು ನಿರ್ಧರಿಸುವ ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ ಏಕೆಂದರೆ ಅವರು ಬಾಹ್ಯ ಅಂಶಗಳಿಂದ ನಿರ್ಬಂಧಿಸಲ್ಪಡುವುದಿಲ್ಲ. ಭಾವನಾತ್ಮಕ ಆರೋಗ್ಯವನ್ನು ಬೆಂಬಲಿಸುವ ಅಂಶಗಳು ಸಂತೋಷದ ಮೇಲೆ ಪರಿಣಾಮ ಬೀರುತ್ತವೆ.

ಪ್ರತಿಯೊಬ್ಬ ವ್ಯಕ್ತಿಯು ತನ್ನ ರೀತಿಯಲ್ಲಿ ಸಂತೋಷವನ್ನು ಕಂಡುಕೊಳ್ಳುತ್ತಾನೆ ಏಕೆಂದರೆ ಅವರಿಗೆ ಸಂತೋಷವನ್ನು ನೀಡುವ ಮತ್ತು ಇಲ್ಲದಿರುವ ವಿಷಯಗಳ ಬಗ್ಗೆ ಅವರು ತಿಳಿದಿರುತ್ತಾರೆ.

# ಕಾನೂನುಗಳು ಕಲಿಕಾಸಕ್ತಿಗೆ ಕಂಟಕವಾಗದಿರಲಿ


## ಕಲಿಕೆಯ ಮೇಲಿನ ಆಸಕ್ತಿ ಇಳಿಮುಖವಾಗುತ್ತಿರುವುದು ಏಕೆ?

ಮನುಷ್ಯನ ಸಾಧನ ಪಥದಲ್ಲಿ ಕಲಿಕೆಯೇ ಪ್ರಧಾನವಾದ ಅಸ್ತ್ರವಾಗಿ ಕಾಣಿಸುತ್ತದೆ. ಕಲಿಕೆ ಎನ್ನುವುದು ಮನಸ್ಸಿನ ಅಭಿವ್ಯಕ್ತಿಯಾಗಿದೆ. ಹುಟ್ಟಿನಿಂದ ಸಾವು ಕಾಣುವ ತನಕ ವ್ಯಕ್ತಿ ಒಂದಲ್ಲ ಒಂದನ್ನು ಕಲಿಯುತ್ತಿರುತ್ತಾನೆ ಮತ್ತು ಅದನ್ನು ತನ್ನೊಳಗೆ ಅಳವಡಿಸಿಕೊಳ್ಳುತ್ತಿರುತ್ತಾನೆ. ಕಲಿಕೆ ಎನ್ನುವುದು ಒಂದು ಕಲೆ. ಇಲ್ಲಿ ಲಿಂಗ, ವಯಸ್ಸು, ಪ್ರದೇಶಗಳ ಹಂಗು ಇರುವುದಿಲ್ಲ. ಮನುಷ್ಯನು ಮೊದಲು ಬೇಟೆಯಾಡಿ ಹಸಿವನ್ನು ನೀಗಿಸುವುದನ್ನು ಕಲಿತ ನಂತರದಲ್ಲಿ ಆಹಾರವನ್ನು ಬಿತ್ತಿ ಬೆಳೆದು ಒಂದು ಕಡೆ ನೆಲೆ ನಿಲ್ಲವುದಕ್ಕೆ ಶುರು ಮಾಡಿ ನಾಗರೀಕತೆಯನ್ನು ಹುಟ್ಟು ಹಾಕಿದ. ಕಲಿಕೆ ಅಂಬೋದು ನಿರಂತರವಾದ ಚಟುವಟಿಯಾಗಿದೆ, ಬೆಂಕಿಯನ್ನು, ಚಕ್ರವನ್ನು ಬಳಸುವುದರಿಂದ ಶುರುವಾಗಿ ಪಟ್ಟಣವನ್ನು ಕಟ್ಟಿ ರಾಜ್ಯ ವನ್ನು ನಡೆಸುವ, ಲಿಪಿಯನ್ನು ಕೆತ್ತುವ ನೆಲೆಯಿಂದ ನಾಗರೀಕತೆಯನ್ನು ನಿಲ್ಲಿಸುವ ತನಕದ ವಿವಿಧ ಕಲಿಕೆಗಳನ್ನು ನಾವು ಗ್ರಹಿಸಿದ್ದೇವೆ.



ಕಲಿಕೆ ವ್ಯಕ್ತಿಗೆ ಲೋಕವನ್ನು ಗ್ರಹಿಸುವುದಕ್ಕೆ ಅಗತ್ಯವಾಗಿದೆ ಅದು ಅವನ ಬೌದ್ಧಿಕ, ಮಾನಸಿಕ, ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟುತ್ತದೆ ಮತ್ತು ಕಟ್ಟುವಂತೆ ಮಾಡಿದೆ. ಕಲಿಕೆಯು ಹುಟ್ಟಿದ್ದು ನಿನ್ನೆ ಮೊನ್ನೆಯಲ್ಲ ಅದು ಮನುಷ್ಯನ ಹುಟ್ಟಿನೊಂದಿಗೆ ಬಂದಿದೆ. ಆದರೆ ಕಲಿಕೆಯ ದಾರಿ ಹಾಗೂ ವಸ್ತು ಮಾತ್ರ ಕಾಲದ ನೆಲೆಯಲ್ಲಿ ಪಲ್ಲಟವಾಗುತ್ತ ನಡೆದಿದೆ. ಗುರುಕುಲದ ಪರಿಸರದ ಒಳಗೆ ಅರಸು ಮಕ್ಕಳ ಕಲಿಕೆಯು ಅರವತ್ತ್ನಾಲ್ಕು ವಿದ್ಯೆಗಳನ್ನು ಒಳಗೊಂಡ ಕಲಿಕೆಯಾಗಿತ್ತು. ಇಲ್ಲಿ ಸಾಮಾನ್ಯರ ಕಲಿಕೆಗೆ ಜಾಗ ಇರಲಿಲ್ಲ, ಆದರೆ ಸಾಮಾನ್ಯ ಜನ ತಮ್ಮ ಸಮುದಾಯದಲ್ಲಿ ಪರಂಪರೆಯೊಳಗೆ ಹಿರಿಯರಿಂದ ಯುದ್ಧ ಕಲೆಯನ್ನು, ಬೇಟೆಯಾಡುವುದನ್ನು, ಚಿತ್ರ ಬಿಡಿಸುವುದನ್ನು, ಹಾಡು ಕಟ್ಟುವ, ಹಾಡುವ ಮತ್ತು ಅನೇಕ ವೃತ್ತಿಯನ್ನು ಅತ್ಯಂತ ಜಾಣ್ಮೆಯಿಂದ ಕಲಿತು ಬದುಕು ನಡೆಸಿದ್ದಾರೆ. ಆಧುನಿಕ ಭಾರತದಲ್ಲಿ ಅಕ್ಷರ, ಪಠ್ಯದ ಕಲಿಕೆಗಳು ಶಾಲೆಯ ಒಡಲಿನಿಂದ ಮಠಮಾನ್ಯದ ಅಂಗಳದಿಂದ ಎಲ್ಲಾ ಜನ ವರ್ಗಕ್ಕೂ ದಕ್ಕುವ ಪರಿಸರವೊಂದು ರೂಪ ಪಡೆಯಿತು.

ಅನ್ನವನ್ನು ಕೂಡಿಸುವುದೇ ಪ್ರಧಾನವಾದ ಅಭಿವ್ಯಕ್ತಿಯಾಗಿದ್ದಾಗ ಅಕ್ಷರ ಕಲಿಕೆಯ ಕಡೆ ಮಕ್ಕಳನ್ನು ಕಳಿಸುವುದಕ್ಕೆ ಯಾರು ಅಷ್ಟಾಗಿ ಗಮನ ಕೊಡಲಿಲ್ಲ ಆದರೂ ಕೆಲವರು ಮಕ್ಕಳನ್ನು ಶಾಲೆಗೆ ಕಲಿಯುವುದಕ್ಕೆ ಸೇರಿಸಿದ್ದು ಉಂಟು; ಈ ಸಮಯದಲ್ಲಿ ಓದಿನ ಮಾದರಿಗಳು ಕಷ್ಟವಾಗಿದ್ದವು, ಬೇಕಾದ ಸಾಮಾಗ್ರಿಗಳು ಸುಲಭಕ್ಕೆ ಸಿಗುತ್ತಿರಲಿಲ್ಲ, ದುಡಿಮೆ ಮಾಡಿಕೊಂಡು, ವಾರನ್ನದಲ್ಲಿ ಹೊಟ್ಟೆಯ ಹಸಿವನ್ನು ನೀಗಿಸಿಕೊಂಡು ಚಿಮಣಿಯ ದೀಪದಲ್ಲಿ, ಬೀದಿ ದೀಪದ ಬೆಳಕಿನಲ್ಲಿ ಕಲಿಯುವ ಕೆಲಸವನ್ನು ಅನೇಕರು ಮಾಡಿ ಅಕ್ಷರ ಲೋಕವನ್ನು ಮೈಗೆ ಹತ್ತಿಸಿಕೊಂಡರೂ ಈ ಕಾಲಮಾನದಲ್ಲಿ ಸೌಲಭ್ಯಗಳು ಕಡಿಮೆ ಇದ್ದರೂ ಆಸಕ್ತಿಯು ಇತ್ತು ಕಲಿಯಬೇಕು ಅಂಬೋ ಹಂಬಲವಿತ್ತು ಈ ನೆಲೆಯಲ್ಲಿ ಕಲಿತ ಅಂಬೇಡ್ಕರ್, ಕಲಾಂರಂತಹ ಅದೇಷ್ಟೋ ಜನ ಮಹಾತ್ಮರಾಗಿ ನಮಗೆ ಮಾದರಿಯಾಗಿದ್ದಾರೆ.



ಡಾ.ಸುಬ್ರಹ್ಮಣ್ಯ ಸಿ ಕುಂದೂರು
ಲೇಖಕರು, ಮಂಗಳೂರು

Scan For Digital Colourful HAMPI TIMES E-paper

ಇಂತಹ ಮಹಾತ್ಮರನ್ನೇ ಮಾದರಿಯಾಗಿ ನಮ್ಮ ಪಠ್ಯಗಳಲ್ಲಿ ಕಲಿಸುವುದು ಇದರೂ ಕಲಿಕೆಯ ಪರಿಸರವು ಈಗ ಪಲ್ಲಟ ವಾಗಿದೆ. ಆಗಿನಂತೆ ಶಾಲೆ, ಕಾಲೇಜುಗಳ ಕೊರತೆ ಇಲ್ಲ. ದೂರ ಹೋಗಬೇಕು ಅಂಬುವುದಿಲ್ಲ, ಪಠ್ಯ ಹಾಗೂ ಅದಕ್ಕೆ ಸಂಬಂಧಿಸಿದ ತಿಳುವಳಿಕೆಗಳು ನಮ್ಮ ಬೆರಳಿನಲ್ಲಿ ಸಿಗುವಷ್ಟು ತಾಂತ್ರಿಕತೆಯೂ ಬೆಳೆದಿದೆ. ಬಹುತೇಕ ಪೋಷಕರು ಈಗೀನ ಕಾಲಮಾನದಲ್ಲಿ ಅಕ್ಷರವನ್ನು ಕಲಿತು ಜ್ಞಾನಿಗಳು ಎನ್ನಿಸಿಕೊಂಡಿದ್ದಾರೆ. ಬಡತನ ಹಾಗೂ ಅನೇಕ ಕಷ್ಟಗಳಿಗೆ ಮೈಕೊಟ್ಟ ಪೋಷಕರು ನಮ್ಮಂತೆ ನಮ್ಮ ಮಕ್ಕಳು ಆಗುವುದು ಬೇಡ ಅವರು ಕಲಿಯಲಿ ಅನ್ನುವ ಆಸೆಯಿಂದ ಹಗಲು ರಾತ್ರಿ ದುಡಿದು ಮಕ್ಕಳನ್ನು ಶಾಲೆಗೆ ಕಳಿಸುತ್ತಿದ್ದಾರೆ. ಆದರೆ ಬಹುತೇಕ ಈ ಮಕ್ಕಳು ಕಲಿಕೆಯನ್ನು ಪ್ರಧಾನ ಅಂತ ಭಾವಿಸದೆ ಸೋಮಾರಿಗಳಾಗಿದ್ದಾರೆ. ಅವರಿಗೆ ಕಲಿಕೆಯು ಗಪ್ಪಗೆ ಮನಸ್ಸಿಗೆ ನಿಲ್ಲುತ್ತಿಲ್ಲ ಬದಲಿಗೆ ಮೊಬೈಲ್, ಗೆಳೆಯರ ಸಂಘ, ಪ್ರೀತಿ–ಪ್ರೇಮಗಳು ಅವರ ಆಸಕ್ತಿಯಾಗಿದೆ. ಹಣವಂತ ಕೆಲವು ಪೋಷಕರು ಕಲಿತೇ ಹಣ ಸಂಪಾದನೆ, ಉದ್ಯೋಗ ಅನ್ನೋದು ಏನು ಬೇಡ ನಮ್ಮಲ್ಲಿ ಇರುವುದನ್ನೇ ನಡೆಸಿದರೆ ಆಯಿತು ಹಾಗಾಗಿ ಪಾಸು ಆದರೆ ಸಾಕು ಕಷ್ಟ ಬರುವುದು ಬೇಡ ಅನ್ನುವವರ ನಡುವೆಯೂ ನಮ್ಮ ಅಂತಸ್ತಿಗೆ ಹೆಸರು ತರುವುದಕ್ಕೆ ಪೂರ್ಣ ಪ್ರಮಾಣದ ಅಂಕ ಪಡೆದು ರಾಜ್ಯಕ್ಕೆ ಮೊದಲು ಬರಬೇಕು. 'ನೀನು ರೂಮಿನಲ್ಲಿ ಕುಳಿತು ಕಲಿ, ಯಾವುದೇ ಆಟ ಸಮಾರಂಭ, ಗೆಳೆಯರ ಸಂಘ ಬೇಡ' ಅನ್ನುವ ಜೊತೆಗೆ ರೂಂಗೆ ಊಟ ಮತ್ತು ತಿಂಡಿಯನ್ನು ಕೊಟ್ಟು ಓದು ಅನ್ನುವುದು ಒಂದು ಶೋಕಿಯಾಗಿ ಕಾಣಿಸುತ್ತದೆ. ಲೋಕದಲ್ಲಿ ಮಕ್ಕಳು ಅಕ್ಷರವನ್ನು ಹುಟ್ಟು ಹಾಕುವ ವ್ಯಕ್ತಿಗಳು ಆಗಬೇಕು ಎಂದು ಪಠ್ಯದಲ್ಲಿ ಇರುವ ಅರ್ಧ ಪ್ರಮಾಣದ ತಿಳುವಳಿಕೆ ಯಾದರೂ ಅವರ ಮನಸ್ಸನ್ನು ಅಪ್ಪಿಕೊಳ್ಳಲಿ, ಸಂಸ್ಕಾರವಂತರಾಗಿಸಿ ಇಲಾಖೆಯು ನಿಗದಿ ಮಾಡಿರುವ ಪರೀಕ್ಷೆಯಲ್ಲಿ ಪಾಸಾಗಲಿ ಅಂತ ಗುರುಗಳು ಎನಿಸಿದವರು ವಿದ್ಯಾರ್ಥಿಗಳನ್ನೇ ಬೇಡಿಕೊಂಡು ಕಲಿಸುವ ಸ್ಥಿತಿಗೆ ಬಂದಿದ್ದಾರೆ, ಒಂದು ವೇಳೆ ನಾಲ್ಕು ಬಿಟ್ಟು ಭಯಪಡಿಸಿ ಕಲಿಸುವ ಅಂದರೆ ಸರ್ಕಾರ ಮಕ್ಕಳಿಗೆ ಹೊಡೆಯುವುದು ಇರಲಿ ಕಣ್ಣು ಬಿಟ್ಟು ನೋಡುವುದು ಸಹ ಕಾನೂನಿನಲ್ಲಿ ಅಪರಾಧ ಅಂತ ಹೇಳಿರುವುದು ಗೊತ್ತಿರುವ ಸಂಗತಿಯಾಗಿದೆ.

ವಿದ್ಯಾರ್ಥಿಗಳು ಎನ್ನಿಸಿಕೊಂಡು ಕಲಿಯುತ್ತಿರುವ ಬಹು ಸಂಖ್ಯೆಯವರು ಇಂದು ಪರೀಕ್ಷೆ ಮತ್ತು ಅಂಕಕ್ಕಾಗಿ ಕಲಿಯುತ್ತಿದ್ದಾರೆ. ಅದರಲ್ಲೂ ಮಕ್ಕಳ ಕಲಿಕೆಯ ಆಸಕ್ತಿ ಕುಂಠಿತವಾಗಿದೆ. ಹತ್ತು ಬಾರಿ ಹೇಳಿಕೊಟ್ಟ ಪಠ್ಯವನ್ನೇ ನೆನಪಿನಲ್ಲಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಹೇಗಾದರೂ ಪಾಸು ಆಗುತ್ತೇವೆ ಅನ್ನೋ ಮಾನಸಿಕತೆಯು ಮಕ್ಕಳ ಕಲಿಕೆಯ ಭಾವನೆಯನ್ನು ಕೊಂದು ಬಿಟ್ಟಿದೆ. ಪೋಷಕರು ಬಿಸಿಲಿನಲ್ಲಿ ನೊಂದು ಬೆಂದು ದುಡಿದು ಮಕ್ಕಳನ್ನು ಕಾಲೇಜಿಗೆ ಕಳಿಸುತ್ತಿದ್ದಾರೆ. ಆದರೆ ಯಾರು ಸಹ ತನ್ನ ದುಡಿಮೆ ವಿವರವನ್ನು ಅಂದರೆ ಶ್ರಮದ ಬೆಲೆಯನ್ನು ತನ್ನ ಮಕ್ಕಳ ಸ್ಪರ್ಶಕ್ಕೆ ತರುತ್ತಿಲ್ಲ. ಈ ಕಾರಣದಿಂದಲೂ ಮಕ್ಕಳು ಕಲಿಕೆಯ ನೆಲೆಯನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ನಮ್ಮ ಒಬ್ಬ ವಿದ್ಯಾರ್ಥಿ ಗೆಳೆಯ ವಾರದಲ್ಲಿ ನಾಲ್ಕು ದಿನ ತರಗತಿಗೆ ಬರುತ್ತಾನೆ. ಪಠ್ಯದ ಕುರಿತು ಯಾವ ಪ್ರಶ್ನೆಯನ್ನು ಕೇಳಿದರೂ ಅವನಲ್ಲಿ ಉತ್ತರವಿರುವುದಿಲ್ಲ, ಕಲಿಯುವುದಕ್ಕೂ ಅವನು ಆಸಕ್ತಿ ವಹಿಸುವುದಿಲ್ಲ. ಒತ್ತಡ ಹಾಕಿದರೆ ಮರುದಿನ ಕಾಲೇಜಿಗೆ ಬರುವುದಿಲ್ಲ. ಅವನ ತಾಯಿ ಬೀದಿಯ ಬದಿಯಲ್ಲಿ ಬಿಸಿಲಿಗೆ ಧೂಳಿಗೆ ಕೂತು ಎಳನೀರು ಕೆತ್ತಿ ಮುಂಜಾನೆಯಿಂದ ಸಂಜೆಯ ತನಕ ಮಾರು ತ್ತಾರೆ. ಇವರ ದುಡಿಮೆ ಉದ್ದೇಶ ತನ್ನ ಮಗ ಕಲಿಯಲಿ ಅನ್ನೋದು ಆದರೆ ಆ ಹುಡುಗನಿಗೆ ತಾಯಿಯ ಸಂವೇದನೆ ಗುರುಗಳು ಕಲಿ ಯುವುದಕ್ಕೆ ಏಕೆ ಹೇಳುತ್ತಾರೆ ಅನ್ನುವುದೇ ಅರ್ಥವಾಗುತ್ತಿಲ್ಲ. ಮಕ್ಕಳು ತಮಗಾಗಿ ಶ್ರಮವಹಿಸುವ ತಂದೆ–ತಾಯಿ, ಗುರುಗಳ ನಡೆಯನ್ನು ಅರ್ಥಮಾಡಿಕೊಂಡು ಕಲಿಕೆಯನ್ನು ಅಪ್ಪಿಕೊಳ್ಳಬೇಕು ಆಗ ಜಗತ್ತು ಅವರದ್ದಾಗುವುದು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಜಿಲ್ಲೆಯ ಮಕ್ಕಳ ಮನೆ ಗ್ರಂಥಾಲಯ ಮಾದರಿ

## ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿಕೆ । ಪುಸ್ತಕ ಸಿರಿ ಗೌರವ, ಓದು ಮನೆ ಸಂಭ್ರಮ

■ ಹಂಪಿ ಟೈಮ್ಸ್ ಕೊಪ್ಪಳ

ಪಾಲಕರ ಸಹಕಾರದೊಂದಿಗೆ ಕೊಪ್ಪಳ ಜಿಲ್ಲೆಯ ಮಕ್ಕಳು ತಮ್ಮ ಮನೆಗಳಲ್ಲಿ ನಿರ್ಮಿಸಿಕೊಂಡಿರುವ ಮಕ್ಕಳ 'ಮನೆ ಗ್ರಂಥಾಲಯ' ಮಾದರಿಯಾಗಿವೆ ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿದರು.

ಅವರು ಸೋಮವಾರ ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಹಾಗೂ ಕಲಿಕೆ ಟಾಟಾ ಟ್ರಸ್ಟ್‌ನ ಸಹಯೋಗದಲ್ಲಿ ಹಮ್ಮಿಕೊಳ್ಳಲಾದ "ಪುಸ್ತಕ ಸಿರಿ ಗೌರವ, ಓದು ಮನೆ ಸಂಭ್ರಮ" ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕರ್ನಾಟಕದಲ್ಲಿ ಹತ್ತು ವರ್ಷದ ಹಿಂದೆ ಶೇ.60 ರಷ್ಟು ಇದ್ದ ಗ್ರಂಥಾಲಯಗಳಲ್ಲಿ ಪುಸ್ತಕ ಓದುವ ಸಂಖ್ಯೆಯು 2018ರಲ್ಲಿ 30 ರಿಂದ 36 ರಷ್ಟು ಇತ್ತು. 2022ಕ್ಕೆ ಶೇ. 57 ರಷ್ಟು ಆಗಿ, ಪ್ರಸ್ತುತ ಆ ಸಂಖ್ಯೆ ಮತ್ತೇ ಶೇ.60ಕ್ಕೆ ಬಂದಿದೆ. 2020-21ರಲ್ಲಿ ಕಲ್ಯಾಣ ಕರ್ನಾಟಕ ಭಾಗದಿಂದ ಆರಂಭವಾದ 'ಓದು ಬೆಳಕು' ಕಾರ್ಯಕ್ರಮದ ಸಂದರ್ಭದಲ್ಲಿ ರಾಜ್ಯದ ಎಲ್ಲಾ ಶಾಲೆಗಳ ಮಕ್ಕಳು ಸೇರಿ ಗ್ರಂಥಾಲಯಗಳಲ್ಲಿ ಸುಮಾರು 10 ಲಕ್ಷ ನೋಂದಣಿ ಯಾಗಿತ್ತು. ಇದರಲ್ಲಿ 8 ಲಕ್ಷಕ್ಕೂ ಅಧಿಕ ನೋಂದಣಿ ನಮ್ಮ ಕಲ್ಯಾಣ ಕರ್ನಾಟಕದ ಭಾಗದ ಮಕ್ಕಳಿಂದಾಗಿತ್ತು. ಕೊಪ್ಪಳ ಜಿಲ್ಲೆಯಿಂದ ಆರಂಭವಾದ 'ಪುಸ್ತಕ ಜೋಳಿಗೆ' ಕಾರ್ಯಕ್ರಮವು ರಾಜ್ಯಕ್ಕೆ ಮಾದರಿಯಾಯಿತು. ಈಗ ನಮ್ಮ ಜಿಲ್ಲೆಯ ಸುಮಾರು 300 ಕ್ಕೂ ಅಧಿಕ ಮಕ್ಕಳು ತಮ್ಮ-ತಮ್ಮ ಮನೆಯಲ್ಲಿ 100 ಕ್ಕಿಂತ ಹೆಚ್ಚು ಪುಸ್ತಕಗಳನ್ನು ಸಂಗ್ರಹಿಸಿ, ಮನೆಯಲ್ಲಿಯೇ ಗ್ರಂಥಾಲಯ



ಮಾಡಿಕೊಂಡಿರುವುದು ಸಂತಸ ತಂದಿದೆ. ಈ ಪ್ರಯತ್ನವು ಭವಿಷ್ಯದಲ್ಲಿ ಆ ಮಕ್ಕಳಿಗೆ ತುಂಬಾ ಅನುಕೂಲವಾಗಲಿದೆ ಎಂದರು.

ರಾಜ್ಯದಲ್ಲಿ 6 ಸಾವಿರಕ್ಕಿಂತ ಹೆಚ್ಚು ಗ್ರಾಮ ಪಂಚಾಯಿತಿಗಳು ಹಾಗೂ 5 ಸಾವಿರಕ್ಕಿಂತ ಗ್ರಾ.ಪಂ ಗ್ರಂಥಾಲಯಗಳಿವೆ. ಆದರೆ, ಶಾಲೆಯ ಓರ್ವ ಮಗು ಮನೆಯಲ್ಲಿಯೇ 100 ಪುಸ್ತಕಗಳನ್ನು ಇಟ್ಟುಕೊಂಡು ಗ್ರಂಥಾಲಯ ಮಾಡಿರುವ ಕೆಲಸ ಬಹುಶಃ ಕೊಪ್ಪಳ ಜಿಲ್ಲೆಯಲ್ಲಿಯೇ ಮಾತ್ರ ಆಗಿದೆ. ಇಂತಹ ಕೆಲಸ ಹೆಚ್ಚಾಗಬೇಕು. ಮಕ್ಕಳು ಶಾಲಾ ಪಠ್ಯ-ಪುಸ್ತಕಗಳ ಜೊತೆಗೆ ರಾಷ್ಟ್ರ, ರಾಜ್ಯಗಳ ಕಲೆ, ಸಾಹಿತ್ಯ, ಸಂಸ್ಕೃತಿ, ಆಚರಣೆ, ಇತಿಹಾಸ ಹಾಗೂ ಇತರೆ ಮಾಹಿತಿ, ಕಥೆಗಳು, ಕಾದಂಬರಿ, ಕಾವ್ಯ ಮತ್ತು ತಮ್ಮ ಜ್ಞಾನವನ್ನು ಹೆಚ್ಚಿಸುವಂತಹ ಒಳ್ಳೆಯ ಪುಸ್ತಕಗಳನ್ನು ಸಂಗ್ರಹಿಸಿ, ಅವುಗಳನ್ನು ಓದುವ ಹವ್ಯಾಸ ರೂಡಿಸಿಕೊಳ್ಳಬೇಕು ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಅವರು ಮಾತನಾಡಿ, ಜೀವನದಲ್ಲಿ ಓದು ಮುಖ್ಯವಾಗಿದೆ. ಮಕ್ಕಳು ಪುಸ್ತಕಗಳನ್ನು ಓದುವುದು ಮತ್ತು ಬರೆಯುವಂತಹ ಕೌಶಲ್ಯಗಳನ್ನು ರೂಡಿಸಿಕೊಳ್ಳಬೇಕು. ಜೀವನದಲ್ಲಿನ ಸಮಸ್ಯೆಗಳು ಮತ್ತು ಸವಾಲುಗಳನ್ನು ಪರಿಹರಿಸುವಂತಹ ಶಕ್ತಿ ಪುಸ್ತಕಗಳಲ್ಲಿ ಅಡಗಿದೆ. ಪುಸ್ತಕಗಳನ್ನು ನಿರಂತರವಾಗಿ ಓದುವುದರಿಂದ ಜೀವನದಲ್ಲಿ ಅತ್ಯುತ್ತಮವಾದ ಸ್ಥಾನದ ಉದ್ಯೋಗವನ್ನು ಪಡೆಯಲು ಸಹಾಯಕವಾಗಿದೆ. ಇಂದಿನ ದಿನಮಾನಗಳಲ್ಲಿ ಗಣಿತಕ್ಕೆ ಬಹಳ ಪ್ರಾಮುಖ್ಯತೆಯಿದ್ದು, ಯಾವುದೇ ವ್ಯಾಪಾರ-ವಹಿವಾಟು ಮಾಡಲು ಲೆಕ್ಕ ಅಗತ್ಯವಾಗಿದೆ. ಗಣಿತವು ಮೆದುಳಿನ ಸಾಮರ್ಥ್ಯ ಮತ್ತು ಶಕ್ತಿಯನ್ನು ಹೆಚ್ಚಿಸುತ್ತದೆ. ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಯ ಪುಸ್ತಕ ಓದುವುದರಿಂದ ಅವರ ಆದರ್ಶಗಳು ನಮಗೆ ತಿಳಿಯುತ್ತವೆ. ಅವುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ನಾವು ಕೂಡಾ ಜೀವನದಲ್ಲಿ ಯಶಸ್ವಿಯಗುತ್ತೇವೆ ಎಂದರು.

ಮಕ್ಕಳ ಸ್ವರಚಿತ ಸಣ್ಣ ಕಥೆಗಳ ಪುಸ್ತಕಗಳ ಪ್ರದರ್ಶನ: ಕಾರ್ಯಕ್ರಮದಲ್ಲಿ ಮಕ್ಕಳ ಸ್ವರಚಿತ ಸಣ್ಣ ಕಥೆಗಳ ಪುಸ್ತಕಗಳ ಪರಿಚಯ ಮತ್ತು ಪ್ರದರ್ಶನ ಮಾಡಲಾಯಿತು. ಓದುಮನೆ ಮಕ್ಕಳಿಗೆ 'ಪುಸ್ತಕಸಿರಿ' ಗೌರವವನ್ನು ನೀಡಲಾಯಿತು.

ಕಾರ್ಯಕ್ರಮದಲ್ಲಿ ಕೊಪ್ಪಳ ಯುನಿಸೆಫ್ ವಿಭಾಗದ ಹರೀಶ್ ಜ್ಯೋಗಿ, ಕಲಿಕಾ ಟಾಟಾ ಟಸ್ಟ್ ಕಲ್ಯಾಣ ಕರ್ನಾಟಕ ಭಾಗದ ಯೋಜನಾ ನಿರ್ದೇಶಕ ಗಿರೀಶ್, ಕಲಿಕಾ ಟಾಟಾ ಟಸ್ಟ್‌ನ ಕಾರ್ಯಕ್ರಮ ಅಧಿಕಾರಿ ಶಿವಕುಮಾರ ಯಾದವ, ರಾಜ್ಯ ಸಂಪನ್ಮೂಲ ವ್ಯಕ್ತಿಗಳಾದ ರಾಜಲಕ್ಷ್ಮೀ, ಸಂಯೋಜಕ ಕಲ್ಲಪ್ಪ ತಳವಾರ ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳು, ಶಿಕ್ಷಕರು, ಶಾಲಾ ಮಕ್ಕಳು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಕವಿ ಮನಸು

### ಜೋಳಿಗೆ

ಅಪ್ಪನ ಹಳೆಯ ಜೋಡಿನಲಿ
ಉಂಗುಷ್ಟಕ್ಕೆ ಅಂಟಿದ ದಬ್ಬಾಳಿಕೆಗಳು.
ಅಲ್ಲಿ ಕೂತು ಬೇಡಿದ ಕೈಗಳಲಿ
ಉಳಿದ ಅಳಿದ ರಾತ್ರಿಯ ಮೃಷ್ಟಾನ್ನ.
ತಿಂದು ತಂದ ಮುಷ್ಟಿಯಲಿ
ನಾಯಿಯ ಹಸಿವಿಗೂ ಸಮಪಾಲು.
ಹರಿದ ಅವ್ವನ ಸೆರಗು
ಮಳೆ ಬಂದಾಗ ಸೋರುವ ಸೂರಿಗೆ,
ಅಡ್ಡೆಹಾಕಿ ಕರುಳ ಬಳ್ಳಿಗಳಿಗೆ ಬೆಚ್ಚಗಿಡುವ
ಛಲ.
ಎತ್ತಿನ ಹೆಗಲು, ಅಪ್ಪನ ಕೈ
ಜಿದ್ದಿಗೆ ಬಿದ್ದವರು.
ಹರಗಿದಂತೆ ಕಾಣುವ
ಕೈ ಗೆರೆಗಳ ಸವಕಳಿ.
ಎಷ್ಟು ಬೆವರು ಸುರಿಸಿದರೇನು
ನೀಡಿದ ಬಿಡಿಗಾಸು
ಮಾರೆಮ್ಮನ ಜಾತ್ರೆಯ,
ಸಾಲದ ಬಡ್ಡಿಗೆ ಪುಡಿಗಾಸು.
ಹಬ್ಬಕ್ಕೆಂದು ಧಣಿ ಒಲಿಸಿಕೊಟ್ಟ
ಕೆಂಪನೆಯ ಅಂಗಿಯಲಿ
ಒಮ್ಮೊಮ್ಮೆ ನನ್ನ ಇರುವಿಕೆ.
ಹರಿದು ಹೋಗುವ ಜೀವಕೆ
ಅವರ ಮನೆಯ ಮುಂದೆ
ಕುಳಿತ ಜಾಗ ಸಂಗಾತಿ .
ಅಲ್ಲಿ ಇಲ್ಲಿ ಅಲೆದಾಡಿ
ನೀಡಿಸಿಕೊಂಡ ಖಾರ,ಸಿಹಿಗಳಲಿ
ಹಬ್ಬದ ಸಂಭ್ರಮ
ಚೂರು ಪಾರು ನೆಕ್ಕುವ ಬೆಕ್ಕಿಗೂ ಚಲ್ಲಾಟ
ಹರಿದ ಕಚ್ಚೆಯ ಚುಂಗಲಿ ಕಟ್ಟಿಕೊಂಡ
ಮಂಡಾಳು.
ಅಲ್ಲಲ್ಲಿ ಸೋರಿ
ಬೇಡುವ ಕೈಗೂ ತೂತಿನ ಸಾಬೀತು .
ಸವೆದ ಜೋಡಿಯ ಪಿನ್ನಿಗೆ
ತುಕ್ಕಿನ ಗೆಳತನ.
ಸವೆದ ದಾರಿಗಳಲಿ ಬರೀ ಕಹಿಗಳ ದಿಬ್ಬಣ.
ಸಮಾನತೆ ಹಾದಿಯಲಿ ಕಂದೀಲು ನಂದಿದೆ.
ಹಿಡಿದ ಜೋಳಿಗೆ ತುಂಬಾ ಅಪಮಾನಗಳ
ತೂತು
ತುಂಬದ ಭಾವದ ಭಾರಕೆ
ಬೇಡುವ ಕೈಗಳು ಸೋತಿವೆ

– ಕೊಟ್ರೇಶ.ಬಿ ಶಿಕ್ಷಕರು
ಸ,ಪ್ರೌಢಶಾಲೆ ಗದ್ದಿಕೆರಿ.ಹ.ಬೊ ಹಳ್ಳಿ ತಾ

# ಫೆ.27 ರಿಂದ ಮಾರ್ಚ್ 3 ರವರೆಗೆ ಕರ್ನಾಟಕ ವಿಧಾನ ಸಭೆ ಸಚಿವಾಲಯದ ಪುಸ್ತಕ ಮೇಳ

■ ಹಂಪಿ ಟೈಮ್ಸ್ ಹೊಸಪೇಟೆ

ಕರ್ನಾಟಕ ವಿಧಾನ ಸಭೆ ಸಚಿವಾಲಯದಿಂದ ಪ್ರಥಮ ಬಾರಿಗೆ ನಾಡಿನ ಜನತೆಗೆ ಅತಿ ಅಮೂಲ್ಯವಾದ ಪುಸ್ತಕಗಳನ್ನು ವೀಕ್ಷಿಸಲು ಮತ್ತು ಖರೀದಿಸಲು ಕರ್ನಾಟಕ ವಿಧಾನ ಸಭಾ ಸಚಿವಾಲಯದ ವತಿಯಿಂದ ಫೆಬ್ರವರಿ 27 ರಿಂದ ಮಾರ್ಚ್ 3 ರವರೆಗೆ "ವಿಧಾನಸೌಧದ ಆವರಣದಲ್ಲಿ ಪುಸ್ತಕ ಮೇಳವನ್ನು" ಏರ್ಪಡಿಸಲಾಗುವುದು ಎಂದು ವಿಧಾನ ಸಭೆ ಸಚಿವಾಲಯದ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಪುಸ್ತಕಮೇಳದಲ್ಲಿನಾಡಿನಪ್ರಕಾಶಕರು,ಮಾರಾಟಗಾರರುಭಾಗವಹಿಸಬಹುದಾಗಿದ್ದು, ಮಳಿಗೆಯೊಂದಕ್ಕೆ ರೂ. 1000 ಗಳ ಭದ್ರತಾ ಠೇವಣಿ ಡಿ.ಡಿ.ಯನ್ನು ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ ಸಚಿವಾಲಯ, ವಿಧಾನಸೌಧ, ಬೆಂಗಳೂರು, ಇವರ ಹೆಸರಿನಲ್ಲಿ ಸಲ್ಲಿಸುವುದು. ಪುಸ್ತಕ ಮೇಳದಲ್ಲಿ ಭಾಗವಹಿಸಲು ಇಚ್ಛಿಸುವ ಪ್ರಕಾಶಕರು, ಮಾರಾಟಗಾರರು ನಿಗದಿತ ಅರ್ಜಿ ನಮೂನೆಯನ್ನು ಮುಖ್ಯ ಗ್ರಂಥಪಾಲಕರು, ಕರ್ನಾಟಕ ವಿಧಾನ ಸಭೆ ಸಚಿವಾಲಯ, ವಿಧಾನಸೌಧ, ಬೆಂಗಳೂರು, ಅಥವಾ ವಿಧಾನ ಸಭೆ ಸಚಿವಾಲಯದ ವೆಬ್‌ಸೈಟ್‌ನಲ್ಲಿ ಅಂದರೆ www.kla.kar.nic.in ನಲ್ಲಿ ಉಚಿತವಾಗಿ ಪಡೆದುಕೊಳ್ಳಬಹುದಾಗಿದೆ. ಭರ್ತಿಮಾಡಿದ ಅರ್ಜಿಯನ್ನು ಡಿ.ಡಿ.ಯೊಂದಿಗೆ ಫೆಬ್ರವರಿ 12 ರಂದು ಸಂಜೆ 5 ರೊಳಗೆ ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ ಸಚಿವಾಲಯ, ವಿಧಾನಸೌಧ, ಬೆಂಗಳೂರು, ಮೂಲಕ ಸಲ್ಲಿಸಲು ಕೋರಿದೆ. ನಿರ್ಮಿಸಲಾಗುವ 75 ಮಳಿಗೆಗಳನ್ನು ಆದ್ಯತೆಯ ಮೇರೆಗೆ ಹಂಚಿಕೆ ಮಾಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮುಖ್ಯ ಗ್ರಂಥಪಾಲಕರು, ಕರ್ನಾಟಕ ವಿಧಾನ ಸಭೆ ಸಚಿವಾಲಯ, ವಿಧಾನಸೌಧ, ಬೆಂಗಳೂರು-560001 ದೂ:080-22381350 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ವಿಧಾನ ಸಭೆ ಸಚಿವಾಲಯದ ಮುಖ್ಯ ಗ್ರಂಥಪಾಲಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಾಲ ವಸೂಲಿ ನೆಪದಲ್ಲಿ ಕಿರುಕುಳ ನೀಡಿದ್ರೆ ಕಠಿಣ ಕ್ರಮ: ಡಿಸಿ


ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯಲ್ಲಿನ ಮೈಕ್ರೋ ಫೈನಾನ್ಸ್ ಕಂಪನಿಗಳು ಆರ್‌ಬಿಐ ಮಾರ್ಗಸೂಚಿಯನ್ವಯ ಕಾರ್ಯ ನಿರ್ವಹಿಸಬೇಕು. ಸಾಲ ವಸೂಲಾತಿ ನೆಪದಲ್ಲಿ ಮಾನಸಿಕವಾಗಿ ನಿಂದಿಸುವುದು, ಅವಾಚ್ಯ ಶಬ್ದ ಬಳಸುವುದು, ಅವಮಾನಿಸುವ ಪ್ರಕರಣಗಳು ಕಂಡುಬಂದಲ್ಲಿ ಶಿಸ್ತು ಕ್ರಮ ಜರುಗಿಸ'ಲಾಗುವುದು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಖಡಕ್ ಸೂಚನೆ ನೀಡಿದರು.

ಮೈಕ್ರೋ ಫೈನಾನ್ಸ್ ಕಂಪನಿಗಳಿಂದ ಸಾಲ ವಸೂಲಾತಿ ನೆಪದಲ್ಲಿ ಸಾಲಗಾರರಿಗೆ ಆಗುತ್ತಿರುವ ಕಿರುಕುಳ ಹಿನ್ನೆಲೆ ಹಾಗೂ ಸಂಸ್ಥೆಗಳ ಪದಾಧಿಕಾರಿಗಳೊಂದಿಗೆ ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ವಿಡಿಯೋ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಸಾಲ ವಸೂಲಾತಿ ನೆಪದಲ್ಲಿ ಯಾವುದೇ ಕಿರುಕುಳ ಪ್ರಕರಣಗಳು ವರದಿಯಾಗಿಲ್ಲ. ಕಂಪನಿಗಳ ಪದಾಧಿಕಾರಿಗಳು ಸಾರ್ವಜನಿಕ ವಲಯದಲ್ಲಿ ಉತ್ತಮ ಭಾಂದವ್ಯ ಇಟ್ಟುಕೊಳ್ಳಬೇಕು. ಕಿರುಕುಳ ಪ್ರಕರಣಗಳಿಗೆ ಆಸ್ಪದ ನೀಡಬಾರದು ಎಂದು ಸೂಚಿಸಿದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
SSLC ವಿದ್ಯಾರ್ಥಿಗಳಿಗಾಗಿ
ಹೈಸ್ಕೋರ್ ಮತ್ತು ಸರಳ ಅಭ್ಯಾಸಕ್ಕೆ ತಜ್ಞ ಶಿಕ್ಷಕರಿಂದ ಸುಲಭ ಅಂಶಗಳು ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ
scan to read epaper
9 ಜುಲೈ 2024 ರಿಂದ ಪ್ರತಿದಿನ
ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಇನ್ಸ್ಟಾಲ್ ಮಾಡಿಕೊಳ್ಳಿ!



## ತುಂಗಭದ್ರಾ ನೀರಿನ ಮಟ್ಟ

ಸೋಮವಾರ : 10-02-2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1614.14 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 7235 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 46.406 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1588.02 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 83 ಕ್ಯುಸೆಕ್ |
| ಸಾಮರ್ಥ್ಯ | 9.454 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಕ್ರೋಧಿ

11-02-2025 – ಮಂಗಳವಾರ

| | |
|---|---|
| ತಿಥಿ | : ಚತುರ್ದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪುಷ್ಯ |
| ಯೋಗ | : ಆಯುಷ್ಮಾನ್ |
| ಕರಣ | : ವಾಣಿಜ |
| ಸೂರ್ಯೋದಯ | : 07:03:03 |
| ಸೂರ್ಯಾಸ್ತ | : 18:19:32 |
| ರಾಹು ಕಾಲ | : 15:30–16:55 |
| ಯಮಘಂಡ ಕಾಲ | : 09:52–11:17 |
| ಗುಳಿಕ ಕಾಲ | : 12:41–14:06 |

# ಕಾಯಕ ಶರಣರ ಆದರ್ಶ ನಮಗೆ ಪ್ರೇರಣೆಯಾಗಬೇಕು

## ಬಿಸಿಯೂಟ ಯೋಜನಾ ನಿರ್ದೇಶಕ ಕೆ.ಜಿ.ಆಂಜನೇಯ ಹೇಳಿಕೆ



■ ಹಂಪಿ ಟೈಮ್ಸ್ ಕೂಡ್ಲಿಗಿ

ನಾವು ಮಾಡುವ ಕೆಲಸವನ್ನು ನಿಷ್ಠೆಯಿಂದ, ಪ್ರೀತಿಯಿಂದ, ಪ್ರಾಮಾಣಿಕವಾಗಿ ಮಾಡಿದಾಗ ನಮಗೆ ಅದರಲ್ಲಿ ತೃಪ್ತಿ ಸಿಗುತ್ತದೆ ಎಂಬ ಸಂದೇಶ ಸಾರಿದ ಕಾಯಕ ಶರಣರ ಆದರ್ಶ ಜೀವನದ ಸಾರ ನಮಗೆ ಪ್ರೇರಣೆಯಾಗಬೇಕು ಎಂದು ಬಿಸಿಯೂಟ ಯೋಜನಾ ನಿರ್ದೇಶಕ ಕೆ.ಜಿ.ಆಂಜನೇಯ ಹೇಳಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಸೋಮವಾರ ತಾಲೂಕು ಆಡಳಿತ ಹಾಗೂ ದಲಿತ ಸಂಘಟನೆಗಳು ಏರ್ಪಡಿಸಿದ್ದ ಕಾಯಕ ಶರಣರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಕಾಯಕದಲ್ಲಿ ಯಾವುದೇ ಮೇಲು-ಕೀಳು ಎಂಬುದು ಇಲ್ಲ. ನಾವು ಮಾಡುವ ಕೆಲಸದಿಂದ ಸಮಾಜಕ್ಕೆ ಒಳಿತಾಗಬೇಕು. 12 ನೇ ಶತಮಾನದ ಎಲ್ಲಾ ಶರಣರು ತಮ್ಮ ಕಾಯಕ ತತ್ವದಿಂದ ಸಮಾಜವನ್ನು ಸರಿದಾರಿಗೆ ತರುವ ಪ್ರಯತ್ನ ಮಾಡಿದ್ದಾರೆ ಎಂದರು.ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ ಹಾಗೂ ಉರಿಲಿಂಗ ಪೆದ್ದಿ ಅವರು 12ನೆಯ ಶತಮಾನದ ಕಲ್ಯಾಣದ ಕ್ರಾಂತಿಕಾರಿ ಶರಣರಾಗಿದ್ದರು, ಸ್ವಾಭಿಮಾನಿ ಶರಣರಾಗಿದ್ದರು ಎಂದು ಬಣ್ಣಿಸಿದರು.

ವಚನ ಸಾಹಿತ್ಯದಲ್ಲಿ ವಿಶ್ವಮಾನವ ದೃಷ್ಟಿಕೋನ ಅಡಕವಾಗಿದೆ. ಎಲ್ಲರೂ ಸಮಾನರು ಉತ್ತಮ ಸಮಾಜ ನಿರ್ಮಾಣದ ಆಶಯ ಶರಣರ ಧ್ಯೇಯವಾಗಿತ್ತು. ಅನುಭವ ಮಂಟಪದಲ್ಲಿ ಭಕ್ತಿ, ಕಾಯಕ, ಮೋಕ್ಷ, ಮುಖ್ಯಬೋಧನೆಯ ವಿಷಯವಾಗಿತ್ತು. ಕಾಯಕದಲ್ಲಿ ನಿರತವಾದರೆ ಮಾತ್ರ ಮೋಕ್ಷ ಎಂಬ ಕಾಯಕ ತತ್ವವನ್ನು ಪ್ರತಿಪಾದಿಸಿದ ವಚನ ಸಾಹಿತ್ಯ ಜಗತ್ತಿನ ಶ್ರೇಷ್ಠ ಸಾಹಿತ್ಯವಾಗಿದೆ ಎಂದು ಹೇಳಿದರು.ತಹಸೀಲ್ದಾರ್ ಎಂ.ರೇಣುಕಾ, ತಾಪಂ ಇಒ ಕೆ. ನರಸಪ್ಪ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಸ್.ವೆಂಕಟೇಶ, ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಎಸ್. ದುರುಗೇಶ್, ಮಹೇಶ, ಎಂ.ಬಿ.ಶಿವರಾಜ್, ಪರಶುರಾಮ, ಅಜೇಯ, ಹೆಗ್ಡಾಳ ಮಹೇಶ, ಸೇರಿದಂತೆ ದಲಿತ ಮುಖಂಡರು, ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಪುನರ್‌ಮನನ ಮಾಡಿ

HAMPI TIMES MARGADARSHI

ಪರೀಕ್ಷೆಗೆ ನಾವು ಸಿದ್ಧ 38 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಟನಾಗು-ಕಾದು ನೋಡು

https://epaper.hampitimes.com

ನಿನ್ನ ಏಳಿಗೆಗೆ ನೀನೇ ಶಿಲ್ಪಿ | ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಚನ್ನುಡಿ

### ಪಠ್ಯಪೂರಕ ಅಧ್ಯಯನ 3. ಉದಾತ್ತ ಚಿಂತನೆಗಳು

**1. ಕ್ರಿಯಾ ಸ್ವಾತಂತ್ರ್ಯ ಎಂದರೇನು?**

ಉತ್ತರ:- ಕ್ರಿಯಾ ಸ್ವಾತಂತ್ರ್ಯವೆಂದರೆ, ತನಗೆ ಇಷ್ಟ ಬಂದ ಕೆಲಸ ಮಾಡಲು ವ್ಯಕ್ತಿಗೆ ಅವಕಾಶವಿರುವುದು. ಅದು ಔಪಚಾರಿಕವಾಗಿದ್ದರೆ ಸಾಲದು, ಅದು ಜಾರಿಯಲ್ಲಿರಬೇಕು ಹಾಗೂ ನಿರ್ದಿಷ್ಟ ಕಾರ್ಯಗಳನ್ನು ಮಾಡಲು ಇರುವ ಪರಿಣಾಮಕಾರಿಯಾದ ಸಾಮರ್ಥ್ಯವಾಗಬೇಕು. ಎಲ್ಲಿ ತನ್ನ ಕೆಲಸದ ಫಲವಾಗಿ ತನ್ನ ಕೆಲಸ, ಮನೆ, ಆಹಾರಗಳನ್ನು ಕಳೆದುಕೊಂಡು ಬಿಡುವ ಭೀತಿ ವ್ಯಕ್ತಿಗೆ ಇರುವುದಿಲ್ಲವೋ ಅದೇ ನಿಜವಾದ ಕ್ರಿಯಾ ಸ್ವಾತಂತ್ರ್ಯ.

**2. ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು?**

ಉತ್ತರ:-- ರಾಜಕೀಯ ಸ್ವಾತಂತ್ರ್ಯ ಎನ್ನುವುದು ಮಾನವ ವ್ಯಕ್ತಿತ್ವ ಮತ್ತು ಸಮಾನತೆಗಳ ತತ್ತ್ವದಿಂದ ಅನುಗಮನ ಮಾಡಿದ ತತ್ತ್ವವೇ ಸರಿ. ಏಕೆಂದರೆ ರಾಜಕೀಯವಾದ ಸಮಸ್ತ ಅಧಿಕಾರವೂ ಜನತೆಯಿಂದ ಬರುತ್ತದೆ. ತಮ್ಮ ಸಾರ್ವಜನಿಕವಾದ ಹಾಗೂ ಖಾಸಗಿಯಾದ ಜೀವನವನ್ನು ನಿರ್ದೇಶಿಸುವ, ನಿಯಂತ್ರಿಸುವ ಸಾಮರ್ಥ್ಯವನ್ನು ಅವರು ತಾವೇ ಹೊಂದಿರುತ್ತಾರೆಯೇ ಹೊರತು ಬೇರೆ ಯಾರೂ ಅಲ್ಲ ಎಂದು ಇದರ ಅರ್ಥವಾಗುತ್ತದೆ.

**3. ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯ ವೇನು?**

ಉತ್ತರ:- ಕೆಟ್ಟ ಅಕ್ಷರದ ಬರವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ ಎಂದು ಅರಿತ ಗಾಂಧೀಜಿ ತನ್ನ ಬರಹವನ್ನು ತಿದ್ದಿಕೊಳ್ಳಬೇಕೆಂದು ಪ್ರಯತ್ನಿಸಿದರು. ಒಳ್ಳೆಯ ಬರವಣಿಗೆ ಉತ್ತಮ ಶಿಕ್ಷಣದ ಅವಶ್ಯವಾದ ಅಂಶವೆಂಬುದನ್ನು ಪ್ರತಿಯೊಬ್ಬ ಯುವಕನೂ, ಯುವತಿಯೂ ತಿಳಿದುಕೊಳ್ಳಲಿ ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರು ಹೇಳಿದ್ದಾರೆ.

**4. 'ಅನ್‌ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು?**

ಉತ್ತರ:- ರಸ್ಕಿನ್‌ನ "ಅನ್‌ಟು ದಿಸ್ ಲಾಸ್ಟ್" ಎಂಬ ಪುಸ್ತಕವನ್ನು ಓದಲು ಪ್ರಾರಂಭಿಸಿದುದೇ ತಡ, ಅದನ್ನು ಕೆಳಗಿಳಿಸಲು ಗಾಂಧೀಜಿಯವರಿಗೆ ಸಾಧ್ಯವಾಗಲಿಲ್ಲ. ಅದು ಅವರ ಮನಸ್ಸನ್ನು ಸೆರೆಹಿಡಿಯಿತು. ಆ ಪುಸ್ತಕದಲ್ಲಿ ಹೇಳಿದ್ದ ಧ್ಯೇಯಗಳಿಗನುಸಾರವಾಗಿ ಜೀವನವನ್ನು ಬದಲಾಯಿಸಿಕೊಳ್ಳಬೇಕೆಂದು ನಿರ್ಣಯಿಸಿದರು. ಅವರ ಬಾಳಿನಲ್ಲಿ ತಕ್ಷಣ ಪರಿಣಾಮಕಾರಿಯಾದ ಬದಲಾವಣೆಯನ್ನು ಮಾಡಿತು.

**5. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?**

ಉತ್ತರ:- ದೇಶದ ಭಾಷೆಯಲ್ಲಿ ಜನರಿಗೆ ಭಾವನೆಗಳನ್ನು ನೀಡಿ. ಅವರು ವಿಷಯಗ್ರಹಣ ಮಾಡಿಕೊಳ್ಳುವರು. ಅದರೊಂದಿಗೆ ಅವರಿಗೆ ಮತ್ತೊಂದು ಆವಶ್ಯಕತೆಯಾದ ಸಂಸ್ಕೃತಿ ನೀಡಬೇಕಾಗುತ್ತದೆ. ಜನರಿಗೆ ಶಿಕ್ಷಣ ಮತ್ತು ಸಂಸ್ಕೃತಿ ಎರಡನ್ನೂ ನೀಡಿದಾಗ ಜನರ ಹಾಗೂ ದೇಶದ ಪ್ರಗತಿ ಸ್ಥಿರವಾಗುವುದು.

**6. ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯ?**

ಉತ್ತರ:- ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ನಿಮ್ಮ ದೇಶದ ಮತ್ತು ಇಡೀ ಜಗತ್ತಿನ ಕಲ್ಯಾಣ ನಿಮ್ಮ ಮೇಲೆ ನಿಂತಿದೆ ಎಂದು ಭಾವಿಸಿ ಕಾರ್ಯೋನ್ಮುಖರಾಗಿ, ವೇದಾಂತದ ಸಂದೇಶವನ್ನು ಪ್ರತಿ ಮನೆಗೂ ಸಾರಿ, ಪ್ರತಿಯೊಂದು ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸಿ. ಅನಂತರ ನೀವು ಎಷ್ಟೇ ಅಲ್ಪವನ್ನು ಸಾಧಿಸಿದ್ದರೂ ನೀವು ಒಂದು ಮಹಾ ಆದರ್ಶಕ್ಕಾಗಿ ಬಾಳಿ ದುಡಿದು ಮಡಿದಿರಿ ಎಂಬ ತೃಪ್ತಿ ಇರುತ್ತದೆ ಎಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ.

### 5. ನಾನು ಪ್ರಾಸ ಬಿಟ್ಟ ಕತೆ

**1. ಪೈಗಳ ತಮ್ಮನ ನೂಲುಮದುವೆಯ ದಿನ ಅಂಗಳದಲ್ಲಿ ಏನೇನು ಸಿದ್ಧತೆಗಳಾಗುತ್ತಿದ್ದವು?**

ಉತ್ತರ:- ಚಪ್ಪರದಲ್ಲಿ ಒಂದು ಕಡೆಯಲ್ಲಿ ಲಡ್ಡುಗೆಗಳನ್ನು ಕಟ್ಟುತ್ತಾರೆ, ಮತ್ತೊಂದು ಕಡೆ ಮಂಡಿಗೆಗಳನ್ನು ಮಡುಚುತ್ತಾರೆ, ಬೇರೊಂದು ಕಡೆ ಸೇವಿಗೆಯನ್ನು ಒತ್ತುತ್ತಾರೆ. ಜೋಳದ ಗದ್ದೆಯಲ್ಲಿ ಗಿಳಿಗಳ ಕೋಲಾಹಲದಂತೆ ಚಪ್ಪರವೆಲ್ಲಾ ಗದ್ದಲ.

**2. ಹಾಡು ಕಿವಿಗೆ ಬಿದ್ದಾಗ ಪೈಗಳು ಏನು ಮಾಡಿದರು?**

ಉತ್ತರ:- ಏನು ತೋಚಿತೊ ದೇವರೇ ಬಲ್ಲ. ಮತ್ತೆ ಚಪ್ಪರದ ಗವುಜು ನನಗೆ ಕೇಳಿಸಲಿಲ್ಲ. ನೆಟ್ಟಗೆ ಹೋದೆ, ಅಭ್ಯಾಸದ ಪುಸ್ತಕವನ್ನು ಹಿಡಿದೆ, ಬರೆಯತೊಡಗಿದೆ. ಇಂದಿನ ಮಾತಿನಲ್ಲಿ ಏಕಾಂಕ ನಾಟಕ ಎನ್ನಬಹುದಾದ ಒಂದು ನಾಟಕವನ್ನು ಇಳಿಹೊತ್ತಿನೊಳಗೆ ಬರೆದು ಮುಗಿಸಿದೆ.

**3. ಪೈಗಳು ಬರೆದ ಮೊದಲ ಯಕ್ಷಗಾನ ಪ್ರಸಂಗದ ಹೆಸರೇನು?**

ಉತ್ತರ:- ಹೆಸರು ಮಕರಾಕ್ಷನ ಕಾಳಗ.

**4. ಬಾಸೆಲ್ ಮಿಶನ್‌ನವರು ಪ್ರಕಟಿಸಿದ್ದ ಯಾವ ಕೃತಿಗಳನ್ನು ಲೇಖಕರು ಓದಿಕೊಂಡರು?**

ಉತ್ತರ:- 'ಹಳಗನ್ನಡ ವ್ಯಾಕರಣ ಸೂತ್ರಗಳು'

**5. "ಬಿಲ್ಲ ಹಬ್ಬ"ವನ್ನು ರಚಿಸಿದ ಕವಿ ಯಾರು?**

ಉತ್ತರ :- ವಾಸುದೇವ ಪ್ರಭು ಎಂಬವರು 'ಬಿಲ್ಲ ಹಬ್ಬ'ವನ್ನು ರಚಿಸಿದರು.

**6. ಮುದ್ದಣ ಕವಿ ಲೇಖಕರಿಗೆ ಏನೆಂದು ಸಲಹೆ ಕೊಟ್ಟರು?**

ಉತ್ತರ:- 1899ರಲ್ಲಿ ಶೇಕ್‌ಸ್ಪಿಯರ್ "ಟ್ವೆಲ್ಫ್‌ನೈಟ್" ಎಂಬ ನಾಟಕದ ಮೊದಲನೆಯ ಅಂಕದಿಂದ ಕೆಲವು ನೋಟಗಳನ್ನು ವೃತ್ತ ಕಂದಗಳಲ್ಲಿ ಕನ್ನಡಿಸಿ, ಅವನ್ನು ಶ್ರೀನಂದಳಿಕೆ ಲಕ್ಷ್ಮೀನಾರಣಪ್ಪ(ಮುದ್ದಣ)ನವರಿಗೆ ಉಡುಪಿಗೆ ಕಳಿಸಿಕೊಟ್ಟೆ. ಮುಂದರಿಸು ಎಂದು ಅವರು ಹೇಳಿಕಳಿಸಿದರು.

**7. ಪ್ರಾಸ ಬಿಡಬೇಕೆಂದು ನಿರ್ಧರಿಸಿದ ಬಳಿಕ ಪೈಗಳು ಯಾವ ಕೃತಿಯನ್ನು ಬರೆದರು?**

ಉತ್ತರ:- ಗಿಳಿವಿಂಡು

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶ್ರೀ ಮಧು. ಕೆ. ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ. ಕೂಡ್ಲಿಗಿ (ತಾ)

ಸಾಯಿಮಣಿ ಪ್ರಕಾಶನ, ಹೊಸಪೇಟೆ




**ಮೈಕ್ರೋ ನ್ಯೂಸ್**

## ಫೆ.14 ರಂದು ಮೈಲಾರ ಕಾರ್ಣಿಕೋತ್ಸವ : ವಿಶೇಷ ಬಸ್ ಸೌಲಭ್ಯ

**ಹಂಪಿ ಟೈಮ್ಸ್ ಹೊಸಪೇಟೆ**
ಫೆ.14 ರಂದು ಹೂವಿನಹಡಗಲಿ ತಾಲೂಕಿನ ಮೈಲಾರ ಗ್ರಾಮದ ಮೈಲಾರಲಿಂಗೇಶ್ವರ ಸ್ವಾಮಿ ಕಾರ್ಣಿಕೋತ್ಸವ ಜರಗಲಿದೆ. ಪ್ರಯಾಣಿಕರು ಹಾಗೂ ಭಕ್ತಾಧಿಗಳ ಅನುಕೂಲಕ್ಕಾಗಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ವತಿಯಿಂದ ವಿಶೇಷ ಬಸ್ ವ್ಯವಸ್ಥೆ ಮಾಡಲಾಗಿದೆ. ಹೊಸಪೇಟೆ, ಕೂಡ್ಲಿಗಿ, ಕೊಟ್ಟೂರು, ಹೂವಿನ ಹಡಗಲಿ, ಹಗರಿಬೊಮ್ಮನಹಳ್ಳಿ, ಹರಪ್ಪನ ಹಳ್ಳಿ ಭಾಗಗಳಿಂದ ಫೆ.12 ರಿಂದ ಫೆ.15 ರವರಗೆ ವಿಶೇಷ ಬಸ್‌ಗಳು ಸಂಚರಿಸಲಿವೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ತಿಮ್ಮಾರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಫೆ.13 ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಹೊಸಪೇಟೆ**
ಕಮಲಾಪುರದ 110/11 ಕೆವಿ ಗ್ರಾಮೀಣ ಉಪವಿಭಾಗ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ನಡೆಯುತ್ತಿರುವುದರಿಂದ ಫೆ.13 ರಂದು ಕಮಲಾಪುರದ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಫೆ.13 ಗುರುವಾರ ಬೆ.9 ಗಂಟೆಯಿಂದ ಸಾಯಂಕಾಲ 5 ಗಂಟೆಯವರೆಗೆ 11 ಕೆವಿ ಕಮಲಾಪುರ ಶಾಖಾ ವ್ಯಾಪ್ತಿಗೆ ಒಳಪಡುವ ಕಮಲಾಪುರ ಪಟ್ಟಣ, ಬುಕ್ಕಸಾಗರ ಗ್ರಾ.ಪಂ, ಸೀತರಾಮ ತಾಂಡ ಗ್ರಾ.ಪಂ, ಮಲಪನಗುಡಿ ಗ್ರಾ.ಪಂ, ಹಂಪಿ ಗ್ರಾ.ಪಂ, ಪಾಪಿನಾಯಕನಹಳ್ಳಿ ಗ್ರಾ.ಪಂ, ಗಾದಿಗನೂರು ಗ್ರಾ.ಪಂ, ಬೈಲುವದ್ದಿಗೆರೆ ಗ್ರಾ.ಪಂ ವ್ಯಾಪ್ತಿಗೆ ಬರುವ ಗ್ರಾಮಗಳು ಹಾಗೂ ನೀರಾವರಿ ಪಂಪ್ ಸೆಟ್ ರೈತರಿಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು ಗ್ರಾಹಕರು ಮತ್ತು ಸಾರ್ವಜನಿಕರು ಸಹಕರಿಸಬೇಕೆಂದು ಜೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರ ದಯಾನಂದ ತಿಳಿಸಿದ್ದಾರೆ.

## ಫೆ.12 ರಂದು ಒಂದು ದಿನದ ಕಾರ್ಯಾಗಾರ

**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಜೀತ ಪದ್ದತಿ ನಿರ್ಮೂಲನಾ ದಿನಾಚರಣೆ ಅಂಗವಾಗಿ ಜೀತ ಪದ್ಧತಿ ನಿಷೇಧ ಅಧಿಕಾರಿಗಳಿಗೆ ಒಂದು ದಿನದ ಕಾರ್ಯಾಗಾರವನ್ನು ಫೆ.12 ರಂದು ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದು, ಎಲ್ಲಾ ಇಲಾಖೆಯ ಅಧಿಕಾರಿಗಳು ತಪ್ಪದೇ ಹಾಜರಾಗಬೇಕು ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಅವರು ತಿಳಿಸಿದ್ದಾರೆ.

## ಫೆ.12 ರಂದು ಮಕ್ಕಳ ಆರೋಗ್ಯ ತಪಾಸಣೆ ಶಿಬಿರ ಮತ್ತು ಪಿಂಕ್ ವ್ಯಾನ್ ಜಾಥಾ ಕಾರ್ಯಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲಾಡಳಿತ ಮತ್ತು ಭಾರತೀಯ ಮಕ್ಕಳ ತಜ್ಞ ವೈದ್ಯರ ಸಂಘ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಮಕ್ಕಳಲ್ಲಿನ ಅಪೌಷ್ಠಿಕತೆಯನ್ನು ಗುರ್ತಿಸಲು 5ನೇ ತರಗತಿಯಿಂದ 10ನೇ ತರಗತಿ ಒಳಗಿನ ಮಕ್ಕಳ ಆರೋಗ್ಯದ ತಪಾಸಣೆ ಮತ್ತು ಪಿಂಕ್ ವ್ಯಾನ್ ಜಾಥಾ ಕಾರ್ಯಕ್ರಮವನ್ನು ಫೆ.12 ರಂದು ಬೆಳಿಗ್ಗೆ 10 ಗಂಟೆಗೆ ಬಿ.ಡಿ.ಎ. ಫುಟ್ಬಾಲ್ ಮೈದಾನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಮಾರ್ಗ: ಪಿಂಕ್ ವ್ಯಾನ್ ಜೊತೆ ಕಾಲ್ನಡಿಗೆ ಜಾಥಾವು ಬೆಳಿಗ್ಗೆ 9 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಆವರಣದಿಂದ (ರೈಲ್ವೇ ಸ್ಟೇಷನ್ ಎದುರಿಗೆ) ಆರಂಭಗೊಂಡು ಬಿ.ಡಿ.ಎ ಫುಟ್ಬಾಲ್ ಮೈದಾನದವರೆಗೆ ನಡೆಯಲಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

# ದಶಕಗಳಿಂದ ಗ್ರಾಮದ ಬಡವರ ಮನೆಗಳಿಗಿಲ್ಲ ವಿದ್ಯುತ್ ಸಂಪರ್ಕ

### ಗ್ಯಾರಂಟಿ ಗೃಹಜ್ಯೋತಿ ವಂಚಿತ ಬಡಕುಟುಂಬಗಳು | ಕಂಬ ಬದಲಾಯಿಸಿ ಪ್ರಾಣ ಕಾಪಾಡಿ
### ಜೆಸ್ಕಾಂ ವಿದ್ಯುತ್ ಬಾಕಿದಾರರನ್ನು ಹುಡುಕಿದಂತೆ, ಶಿಥಿಲ ಕಂಬಗಳತ್ತ ಕಣ್ಣಾಯಿಸಿ ಬದಲಾಯಿಸಿ

**■ ಮಾರೇಶ ತಿಪ್ಪೇಹಳ್ಳಿ**
**ಹಂಪಿ ಟೈಮ್ಸ್ ಕೂಡ್ಲಿಗಿ**
ತಾಲೂಕಿನ ಕಾನ ಹೊಸಹಳ್ಳಿ ಸಮೀಪದ ಪೂಜಾರಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಿಪ್ಪೇಹಳ್ಳಿ ಗ್ರಾಮದ ಶ್ರೀ ದುರ್ಗಾಂಬಿಕಾ ದೇವಸ್ಥಾನದ ಹತ್ತಿರ ಮನೆಗಳ ಪಕ್ಕದಲ್ಲಿ ಹಾಗೂ ಸಾರ್ವಜನಿಕರ ರಸ್ತೆಬದಿಯಲ್ಲಿ ವಿದ್ಯುತ್ ಕಂಬವು ಅಸ್ತಿಪಂಜರದಂತಾಗಿದ್ದರೂ ಸಂಬಂಧಿಸಿದವರು ಗಮನ ಹರಿಸಿ, ಬದಲಾಯಿಸಲು ಮುಂದಾಗದಿರುವುದಕ್ಕೆ ಗ್ರಾಮದ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಗ್ರಾಮದಲ್ಲಿ ವಾಸಿಸುವ ಮನೆಗಳ ಪಕ್ಕದಲ್ಲಿ ವಿದ್ಯುತ್ ಕಂಬ ಮುರಿದು ಬೀಳುವ ಹಂತದಲ್ಲಿದೆ. ಮಳೆಗಾಳದಲ್ಲಿ ಅರ್ಥಿಂಗ್ ಆಗಿದ ಅನಾಹುತ ಸಂಭವಿಸುವ ಸಾಧ್ಯತೆಗಳು ಹೆಚ್ಚಾಗಿದೆ ಎಂದು ಅನೇಕ ಬಾರಿ ಗ್ರಮ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳ ಗಮನಕ್ಕೂ ತಂದರು ಪ್ರಯೋಜನವಾಗಿಲ್ಲ. ಕೂಡ್ಲಿಗಿ ಪ್ರವಾಸಿ ಮಂದಿರ ಆವರಣದಲ್ಲಿ ನಡೆದ ಜನ ಸಂದರ್ಶನ ಕಾರ್ಯಕ್ರಮದಲ್ಲಿ. ಕಾಲೋನಿಯ 15 ರಿಂದ 20 ಮನೆಗಳಿಗೆ ವಿದ್ಯುತ್ ಕಂಬಗಳನ್ನು ಅಳವಡಿಸಬೇಕು ಎಂದು ಮನವಿ ಸಲ್ಲಿಸಿದರು ಇದೂವರೆಗೂ ಸಮಸ್ಯೆ ಬಗೆಹರಿಸಲು ಮುಂದಾಗಿಲ್ಲ ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಕೆಇಬಿ ಅಧಿಕಾರಿಗಳು ಗಮನ ಹರಿಸಿ ಮುರಿದು ಬೀಳುವ ಹಂತದಲ್ಲಿರುವ ವಿದ್ಯುತ್ ಕಂಬವನ್ನು ಕೂಡಲೇ ಬದಲಾವಣೆ ಮಾಡಬೇಕು. ನಂತರ ಗ್ರಾಮದ ದಲಿತ ಕಾಲೋನಿಯಲ್ಲಿ ಸುಮಾರು ಹದಿನೈದು ವರ್ಷಗಳಿಂದ ವಾಸಿಸು ವಂತಹ ಮನೆಗಳಿಗೆ ವಿದ್ಯುತ್ ಸಂಪರ್ಕವೇ ಇಲ್ಲ ಅದಕ್ಕಾಗಿ ಈ ಕ್ಷೇತ್ರದ ಶಾಸಕರಾದರು, ಗಡಿ ಗ್ರಾಮದ ಕಡೆಗೆ ಗಮನಹರಿಸಿ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.




> ಗ್ರಾಮದಲ್ಲಿ ಶಿಥಿಲಗೊಂಡ ಕಂಬದ ಸಮೀಪದಲ್ಲಿ ದೇವಸ್ಥಾನವಿದ್ದು, ವಾಸಿಸುವ ವಾಸದಮನೆಗಳಿವೆ. ಜನನಿಬಿಡ ಪ್ರದೇಶದಲ್ಲಿ ವಿದ್ಯುತ್ ಕಂಬ ಬಿದ್ದರೆ ಜೀವ ಹಾನಿಯಾಗುವ ಸಂಭವಗಳಿವೆ. ವಿದ್ಯುತ್ ಕಂಬವನ್ನು ಶೀಘ್ರ ಬದಲಾಯಿಸಬೇಕು. ಸುಮಾರು 15–20 ವರ್ಷಗಳಿಂದ ಬಡ ಕುಟುಂಬಗಳು ಇಲ್ಲಿ ಜೀವನ ನಡೆಸುತ್ತಿದ್ದು, ಮನೆಗಳಿಗೆ ಬೆಳಕಿಲ್ಲದೆ ಕತ್ತಲಿನಲ್ಲಿ ಜೀವನ ನಡೆಸುತ್ತಿದ್ದಾರೆ, ಈ ಹಿಂದೆ ಕೂಡ್ಲಿಗಿಯಲ್ಲಿ ನಡೆದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಈ ಕುರಿತು ಮನವಿ ಕೊಟ್ಟರು ಸಹ ಯಾವ ಅಧಿಕಾರಿಯು ಸಹ ಇತ್ತಕಡೆ ಗಮನ ಹರಿಸಿಲ್ಲ, ಈಗಲಾದರೂ ಗಡಿ ಗ್ರಾಮದ ಸಮಸ್ಯೆಯನ್ನು ಗಮನಿಸಿ, ಸಮಸ್ಯೆ ಪರಿಹರಿಸಿ.
>
> **– ಟಿ.ರುದ್ರಮುನಿ. DSS ಉಪಾಧ್ಯಕ್ಷ ತಿಪ್ಪೇಹಳ್ಳಿ**

> ತಾಲೂಕಿನ ಬಹುತೇಕ ಗ್ರಾಮಗಳಲ್ಲಿ ಶಿಥಿಲಗೊಂಡಿರುವ ವಿದ್ಯುತ್ ಕಂಬಗಳು, ತುಕ್ಕು ಹಿಡಿದಿರುವ ಹಳೆಯ ಕಂಬಗಳಿರುವುದು ಗಮನಕ್ಕಿದೆ. ಆದರೆ ತಿಪ್ಪೇಹಳ್ಳಿ ಗ್ರಾಮದಲ್ಲಿ ಶಿಥಿಲಗೊಂಡಿರುವ ಕಂಬಗಳಾಗಲಿ, ಹೊಸ ಕಂಬಗಳಾಗಲಿ, ಬೇಕಿರುವ ಮಾಹಿತಿ ಇದುವರೆಗೂ ನಮಗಮ ಗಮನಕ್ಕೆ ಬಂದಿಲ್ಲ, ಗ್ರಾಮಕ್ಕೆ ಭೇಟಿ ಮಾಡಿ, ಪರಿಶೀಲಿಸಿ, ಮೇಲಾಧಿಕಾರಿಗಳಿಗೆ ತಿಳಿಸುತ್ತೇವೆ.
>
> **– ಮಾರಪ್ಪ, ಜೆಸ್ಕಾಂ ಇಲಾಖೆ ಇಂಜಿನಿಯರ್, ಹೂಡೇಂ ಶಾಖೆ**

# ನಮ್ಮ ಶಿಕ್ಷಣ, ಸುರಕ್ಷತೆ, ಏಳಿಗೆಗೆ ಶ್ರಮಿಸುವ ತಂದೆ ತಾಯಿ ಸೈನಿಕರೇ ನಮಗೆ ಆದರ್ಶವಾಗಲಿ

### ಉಪನ್ಯಾಸಕ ಹೆಚ್.ಮಲ್ಲಿಕಾರ್ಜುನ ಅಭಿಮತ | ವಿವಿಧ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ ಪ್ರದಾನ

**■ ಹಂಪಿ ಟೈಮ್ಸ್ ಹರಪನಹಳ್ಳಿ**
ಯಾವುದೇ ಪ್ರತಿಫಲ ಇಲ್ಲದೆ ನಿಸ್ವಾರ್ಥವಾಗಿ ಸಮಾಜಮುಖಿ ಕಾರ್ಯಗಳನ್ನು ಹಮ್ಮಿಕೊಳ್ಳುವುದು ವಿರಳ ಅದರ ಹಿಂದೆ ಲಾಭ ನಷ್ಟ ವಿಚಾರ ಮಾಡುತ್ತಾರೆ ಅದರೆ ಉಪನ್ಯಾಸಕ ಮಲ್ಲಿಕಾರ್ಜುನ ದಂಪತಿಗಳು ಮೌಲ್ಯಯುತವಾದ ಚಟುವಟಿಕೆಗಳ ಮೂಲಕ ಸಮಾಜ ಮುಖಿಯಾಗಿದ್ದಾರೆ ಎಂದು ಸಬ್ ಇನ್ಸ್‌ಪೇಕ್ಟರ್ ಶಂಭುಲಿಂಗ ಹಿರೇಮಠ್ ಅಭಿಪ್ರಾಯಪಟ್ಟರು.

ಪಟ್ಟಣದ ನವಜ್ಯೋತಿ ಸಾಂಸ್ಕೃತಿಕ ಸೇವಾ ಸಂಸ್ಥೆ ಬಸಮ್ಮ ಕಲಾಮಂದಿರದಲ್ಲಿ ಹಮ್ಮಿಕೊಂಡ ಗಣರಾಜ್ಯೋತ್ಸವ, ಸ್ವಾಮಿ ವಿವೇಕಾನಂದ ಜಯಂತಿ, ನೇತಾಜಿ ಸುಭಾಷ್ ಚಂದ್ರ ಬೋಸ್ ಜಯಂತಿ ಅಂಗವಾಗಿ ವಿವಿಧ ಕ್ಷೇತ್ರದ ಸಾಧಕರಿಗೆ, ಸೈನಿಕರಿಗೆ, ಮತ್ತು ವಿದ್ಯಾರ್ಥಿಗಳಿಗೆ "ಸ್ವಾಮಿ ವಿವೇಕಾನಂದ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ" ಪ್ರದಾನ ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು. ಸಾಂಸ್ಕೃತಿಕ ವೇದಿಕೆ ಮೂಲಕ ಅನೇಕ ವಿವಿಧ ಕ್ಷೇತ್ರದ ಸಾಧಕರನ್ನು ಗುರ್ತಿಸಿ ಅವರಿಗೆ ಗೌರವಿಸಿ ಪ್ರೋತ್ಸಹಿಸುತ್ತಿದ್ದಾರೆ. ಅದಮ್ಯಚೇತನಗಳ ಸ್ಮರಣೆ ಮೂಲಕ ಕಾರ್ಯಕ್ರಮ ಮಾಡುತ್ತಿರುವುದು ಸಂತೋಷವಾಗಿದೆ. ಇಂತಹ ಸಾಂಸ್ಕೃತಿಮ ಮನಸ್ಸನ್ನಯ ಹೊಂದಿರುವ ವ್ಯಕ್ತಿಗಳು ಸಮಾಜದಲ್ಲಿ ಬಹಳ ಕಡಿಮೆ ಎಂದರು.

ಉಪನ್ಯಾಸಕ ಹೆಚ್.ಮಲ್ಲಿಕಾರ್ಜುನ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ, ತಂದೆ–ತಾಯಿ, ನೆಚ್ಚಿನ ಗುರುಗಳು ಮತ್ತು ಸೈನಿಕರು ನಮ್ಮ ನೆಚ್ಚಿನ ಆದರ್ಶ ವ್ಯಕ್ತಿಗಳಾಗಬೇಕು ಎಂದರು.

ಹರಪನಹಳ್ಳಿ ಕೆ.ಕೆ.ಆರ್.ಟಿ.ಸಿ. ಘಟಕ ವ್ಯವಸ್ಥಾಪಕಿ ಮಂಜುಳಾ ಎಂ. ಮಾತನಾಡಿ, ಕೆಲಸಮಾತಾಗಬೇಕು ಮಾತು ಕೆಲಸವಾಗಬಾರದು, ಯವುದೇ ಕ್ಷೇತ್ರದಲ್ಲಿ ಸತತವಾಗಿ ಕೆಲಸ ಮಾಡಿದಲ್ಲಿ ಗುರಿ ತಲುಪಬಹುದು ಎಂದರು.

ಸಪ್ನ ಮಲ್ಲಿಕಾರ್ಜುನ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರಪಂಚದಲ್ಲಿಯೇ ಶ್ರೇಷ್ಠವಾದ ಸಂವಿಧಾನ ಭಾರತ ಸಂವಿಧಾನ ಇದು ಸರ್ವರಿಗೂ ಶಕ್ತಿ, ಸಮಾನತೆ ಮತ್ತು ಮೂಲಭೂತ ಹಕ್ಕುಗಳನ್ನು ಒದಗಿಸಿದೆ ಎಂದರು.

ಕಾರ್ಯಕ್ರಮವನ್ನು ಮಾಜಿ ಸೈನಿಕರಾದ ರಾಜಾ ಪೂಜಾರ್ ಮತ್ತು ಪೂಜಾರ್ ರೇಖಪ್ಪ ಉದ್ಘಾಟಿಸಿದರು. ವಿವಿಧ ಕ್ಷೇತ್ರದ ಸಾಧಕ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಕಾರ್ಯಕ್ರಮದಲ್ಲಿ ಮಾಜಿ ಸೈನಿಕರಾದ ಎ. ಆನಂದಪ್ಪ, ರಾಜಾ ಪುಜಾರ್, ಪೂಜಾರ್ ರೇಖಪ್ಪ, ರವಿನಾಯ್ಕ, ಎಂ.ಡಿ ರಹಿಮಾನ್, ಓಬಳಾಪುರ ಚನ್ನಬಸಪ್ಪ, ಅಜ್ಜಪ್ಪ, ಗುರುಮಠ್, ಆನಂದರಾವ್ ಶಿಂಗ್ರಿಹಳ್ಳಿ, ಡಿಗ್ಗಿ ಹಾಲೇಶ್, ನಾಗರಾಜ ಅರಸಿಕೇರಿ ಬಸವರಾಜ ಗುಂಡಗತ್ತಿ, ರವಿನಾಯ್ಕ ಇವರಿಗೆ "ಸ್ವಾಮಿ ವಿವೇಕಾನಂದ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ" ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಎಸ್.ವಿ. ತ್ಯಾಗರಾಜ್, ಮುನೇಗೌಡ, ಕೆ.ಕೆ ಸೃಷ್ಠಿ, ಹೆಚ್. ತಿಲಕ್, ಪ್ರಿಯಾಂಕ್, ಲೇಖನ, ಸಂಗೀತ, ರೋಜಾ, ಪ್ರತಿಭಾ, ರಮ್ಯ, ಸಿದ್ದೇಶ್, ಕಿರಣ್, ಅಂಜಿನಪ್ಪ, ವಿಕಾಸ್, ವೆಂಕಟೇಶ್ ಇದ್ದರು.



# ಸಾಲ ವಸೂಲಿಗೆ ಮೈಕ್ರೋ ಫೈನಾನ್ಸ್‌ನಿಂದ ಕಿರುಕುಳ ನೀಡುವಂತಿಲ್ಲ

**ಮೂರನೆ ಪುಟದಿಂದ**
ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಕಂಪನಿಗಳಿಂದ ಆಗುತ್ತಿರುವ ಆತ್ಮಹತ್ಯೆ ಪ್ರಕರಣಗಳ ಕುರಿತಾಗಿ ಈಗಾಗಲೇ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರ ನೇತೃತ್ವದಲ್ಲಿ ಸಭೆ ನಡೆಸಿ, ಸುಗ್ರಿವಾಜ್ಞೆ ಹೊರಡಿಸಲಾಗಿದೆ. ಮುಂದಿನ ದಿನಗಳಲ್ಲಿ ಕಾಯ್ದೆಯು ಜಾರಿಗೆ ಬರಲಿದೆ ಎಂದು ತಿಳಿಸಿದರು.

**ಆರ್.ಬಿ.ಐ ಮಾರ್ಗಸೂಚಿ ಪಾಲನೆ ಕಡ್ಡಾಯ:** ಮೈಕ್ರೋ ಫೈನಾನ್ಸ್ ಕಂಪನಿಗಳು ಕಡ್ಡಾಯವಾಗಿ ಆರ್.ಬಿ.ಐ ಮಾರ್ಗಸೂಚಿ ಪಾಲನೆ ಮಾಡಬೇಕು. ಸಾಲ ಮಂಜೂರಾತಿ ಹಾಗೂ ವಸೂಲಾತಿ ನಿಯಮ ಬದ್ಧವಾಗಿರಬೇಕು. ಯಾವುದೇ ಕಾರಣಕ್ಕೂ ನಿಯಮಬಾಹಿರ ಮಾರ್ಗ ಅನುಸರಿಸಬಾರದು. ಸಾಲ ಮಂಜೂರಾತಿ ಸಂದರ್ಭದಲ್ಲಿ ನೇರವಾಗಿ ಸಾಲ ಪಡೆದವರೊಂದಿಗೇ ವ್ಯವಹರಿಸಬೇಕು. ಮಧ್ಯವರ್ತಿಗಳಿಗೆ ಅವಕಾಶ ನೀಡಬಾರದು ಎಂದರು.

ಪಡೆದ ಸಾಲ ವಸೂಲಾತಿ ನೆಪದಲ್ಲಿ ಯಾವುದೇ ಕಾರಣಕ್ಕೂ ಕಿರುಕುಳ ನೀಡುವಂತಿಲ್ಲ ಎಂದು ತಾಕೀತು ಮಾಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ ಅವರು ಮಾತಾನಾಡಿ, ವಿನಾಃಕಾರಣ ತೊಂದರೆ ಕೊಟ್ಟವರಿಗೆ ಕಾನೂನುಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

**ಆನಂದ ಬಾಣ**




## ಆಸ್ತಿ ನೈಜತೆ ಹೆಚ್ಚಳಕ್ಕಾಗಿ ಇ-ತಂತ್ರಾಂಶ ಸಂಯೋಜನೆ : ಡಿಸಿ ಎಂ.ಎಸ್.ದಿವಾಕರ್

**■ ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಸ್ಥಿರಾಸ್ಥಿಗಳ ನೋಂದಣಿಯನ್ನು ಇ–ಆಸ್ತಿ ತಂತ್ರಾಂಶದಿಂದ ನೋಂದಾಯಿಸಲು ಇ–ಆಸ್ತಿ ತಂತ್ರಾಂಶವನ್ನು ಕಾವೇರಿ–2 ತಂತ್ರಾಂಶದೊಂದಿಗೆ ಸಂಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

ಇ–ಖಾತಾ ಸಂಯೋಜನೆಯಿಂದ ಸಾರ್ವಜನಿಕರಿಗೆ ತುಂಬಾ ಉಪಯೋಗವಾಲಿದೆ. ಪ್ರಮುಖವಾಗಿ ಇ–ಆಸ್ತಿ ತಂತ್ರಾಂಶದಿಂದಾಗಿ ಸ್ವತ್ತುಗಳ ನೋಂದಣಿ ವೇಳೆ ಸಾರ್ವಜನಿಕರು ಮೋಸ ಹೋಗುವುದನ್ನು ತಡೆಯುವುದು, ಇ–ಖಾತಾದಿಂದ ಮಾತ್ರ ಸ್ವತ್ತಿನ ಸ್ವರೂಪ ಮತ್ತು ನೈಜ ಮಾಲೀಕರನ್ನು ಗುರುತಿಸಲು ಸಾಧ್ಯವಾಗಲಿದೆ. ನೈಜ ಮಾಲೀಕರಿಗೆ ವಂಚಿಸಿ ಬೇರೆಯವರಿಂದ ಸ್ವತ್ತುಗಳ ನೋಂದಣಿಯನ್ನು ತಪ್ಪಿಸಬಹು ದಾಗಿದೆ. ಸ್ವತ್ತುಗಳ ಖರೀದಿದಾರರಿಗೆ ಸ್ವತ್ತಿನ ನೈಜ ಮಾಲೀಕರನ್ನು ಗುರುತಿಸಬಹುದು. ಭವಿಷ್ಯದಲ್ಲಿ ಉಂಟಾಗಬಹುದಾದ ವ್ಯಾಜ್ಯ, ಕಾನೂನಾ ತ್ಮಕ ತೊಂದರೆ ತಪ್ಪಲಿದೆ. ಸಾರ್ವಜನಿಕರು ಇ–ಆಸ್ತಿ ಸಂಯೊಜನೆಯ ಸದುಪಯೋಗವನ್ನು ಪಡೆದುಕೊಳ್ಳುವಂತೆ ಅವರು ತಿಳಿಸಿದ್ದಾರೆ.

## ಕೃಷಿ ತರಬೇತಿ ಕಾರ್ಯಗಾರಕ್ಕೆ ರೈತರಿಗೆ ಅಹ್ವಾನ : ಸಿಆರ್ ಅಭಿಲಾಷ

**■ ಹಂಪಿ ಟೈಮ್ಸ್ ಹೊಸಪೇಟೆ**
ಜಲ ನಿರ್ವಹಣೆ, ಜಲ ಭದ್ರತಾ ಯೋಜನೆ ಸಿದ್ದಪಡಿಸುವುದು, ನೀರಿನ ಬೇಡಿಕೆ ಕಡಿಮೆ ಮಾಡುವ ಸೂಕ್ಷ್ಮ ನೀರಾವರಿ ತಾಂತ್ರಿಕತೆಗಳು, ಜಲ ಮರುಪೂರೈಕೆ ಕುರಿತು ರೈತರಿಗೆ ಒಂದು ದಿನದ ತರಬೇತಿ ಕಾರ್ಯಗಾರ ಹಮ್ಮಿಕೊಳ್ಳಲಾಗಿದೆ ಎಂದು ಕಂಪ್ಲಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ನಿರ್ದೇಶಕಿ ಸಿ.ಆರ್.ಅಭಿಲಾಷ ತಿಳಿಸಿದ್ದಾರೆ.

ಅಟಲ್ ಭೂಜಲ ಯೋಜನೆ ಅಡಿ ಸಮುದಾಯ ಸಹಭಾಗಿತ್ವದಲ್ಲಿ ಜಿಲ್ಲೆಯ ಹೂವಿನ ಹಡಗಲಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಲ್ಲಿ ತರಬೇತಿ ಏರ್ಪಡಿಸಲಾಗಿದೆ. ಪ್ರತಿ ತಾಲ್ಲೂಕಿನಿಂದ 50 ಜನ ರೈತ, ರೈತ ಮಹಿಳೆಯರು ಭಾಗವಹಿಸಲು ಅವಕಾಶವಿದೆ. ತರಬೇತಿಯಲ್ಲಿ ಭಾಗವಹಿಸುವವರು ಮೊ. 6360139316 ಸಂಖ್ಯೆಗೆ ಕರೆ ಮಾಡಿ ನೊಂದಾಯಿಸಿಕೊಳ್ಳಬೇಕು. ಹರಪನಹಳ್ಳಿ ತಾಲೂಕಿನ ರೈತರಿಗೆ ಫೆ.11 ರಂದು ಬೆ.10:30 ಕ್ಕೆ, ಹಗರಿಬೊಮ್ಮನಹಳ್ಳಿ ತಾಲೂಕಿನ ರೈತರಿಗೆ ಫೆ.13 ರಂದು ಬೆ.10:30 ಕ್ಕ ಹಾಗೂ ಹರಪನಹಳ್ಳಿ ತಾಲೂಕಿನ ರೈತರಿಗೆ ಫೆ.18 ರಂದು ಬೆ.10:30 ಕ್ಕ ಹೂವಿನಹಡಗಲಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಲ್ಲಿ ನಡೆಯುವ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾ.08 ರಾಷ್ಟ್ರೀಯ ಲೋಕ ಅದಾಲತ್

**■ ಹಂಪಿ ಟೈಮ್ಸ್ ಬಳ್ಳಾರಿ**

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಇವರ ನಿರ್ದೇಶನದಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ವತಿಯಿಂದ ಮಾ.08 ರಂದು ನಗರದ ತಾಳೂರು ರಸ್ತೆಯ ಹೊಸ ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿ ರಾಷ್ಟ್ರೀಯ ಲೋಕ ಅದಾಲತ್ ನಡೆಸಲಾಗುವುದು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಕೆ.ಜಿ.ಶಾಂತಿ ಅವರು ತಿಳಿಸಿದ್ದಾರೆ.

ಸಾರ್ವಜನಿಕರು ತಮ್ಮ ವ್ಯಾಜ್ಯಪೂರ್ವ, ರಾಜಿಯಾಗಬಹುದಾದ ಅಪರಾಧಿಕ ಪ್ರಕರಣಗಳು, ಬ್ಯಾಂಕ್ ಪ್ರಕರಣಗಳು, ಮೋಟಾರು ವಾಹನ ಅಪಘಾತ ಪರಿಹಾರ ನ್ಯಾಯಾಧೀಕರಣದ ಪ್ರಕರಣಗಳು, ವೈವಾಹಿಕ ಹಾಗೂ ಕೌಟುಂಬಿಕ ಪ್ರಕರಣಗಳು, ಸಿವಿಲ್ ಪ್ರಕರಣಗಳು ಹಾಗೂ ಇತರೆ ರಾಜಿಯಾಗಬಹುದಾದ ಪ್ರಕರಣಗಳನ್ನು ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಒಟ್ಟು 31 ನ್ಯಾಯಾಲಯಗಳಲ್ಲಿ ಮಾ.08 ರಂದು ನಡೆಯುವ ಮೆಗಾ–ಲೋಕ್ ಅದಾಲತ್ ಮೂಲಕ ಶೀಘ್ರವೇ ಇತ್ಯರ್ಥಗೊಳಿಸಿ ಪರಿಹಾರ ಪಡೆದುಕೊಳ್ಳಲು ಸುವರ್ಣ ಅವಕಾಶವಾಗಿದೆ. ಸಾರ್ವಜನಿಕರು ಹಾಗೂ ಕಕ್ಷಿದಾರರು ಇದರ ಪ್ರಯೋಜನ ಪಡೆದುಕೊಂಡು ತಮ್ಮ ವಿವಾದಗಳನ್ನು ಅಂತ್ಯಗೊಳಿಸಬಹುದು ಎಂದು ಅವರು ತಿಳಿಸಿದ್ದಾರೆ.

ರಾಷ್ಟ್ರೀಯ ಲೋಕ್ ಅದಾಲತ್ ಅಂಗವಾಗಿ ಪ್ರತಿದಿನ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಒಟ್ಟು 31 ನ್ಯಾಯಾಲಯಗಳಲ್ಲಿ ಪೂರ್ವಭಾವಿ ಬೈಠಕ್‌ಗಳು ನಡೆಯುತ್ತಲಿವೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕಚೇರಿ ಅಥವಾ ದೂ.08392–278077 ಗೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.